ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ನವೆಂಬರ್ 25, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 193 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



**ತುಳಸಿ ವಿವಾಹ ...**

ದಾವಣಗೆರೆ ನಗರದಾದ್ಯಂತ ತುಳಸಿ ವಿವಾಹವನ್ನು ಶುಕ್ರವಾರ ಸಂಜೆ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ಕಾರ್ತಿಕ ಮಾಸದ ದ್ವಾದಶಿ ತಿಥಿಯಂದು ತುಳಸಿ ವಿವಾಹ ಅಥವಾ ತುಳಸಿ ಪೂಜೆಯನ್ನು ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪೂಜಾ ವಸ್ತುಗಳಿಗೆ ಬೆಳಿಗ್ಗೆ ಮಾರುಕಟ್ಟೆಯಲ್ಲಿ ಭಾರೀ ಬೇಡಿಕೆ ಉಂಟಾಗಿತ್ತು.

# ಡಿಕೆಶಿ ವಿರುದ್ಧ ತನಿಖೆ ಅನುಮತಿ ವಾಪಸ್‌ಗೆ ಸಿಎಂ ಸಮರ್ಥನೆ

ಬೆಂಗಳೂರು, ನ. 24 - ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದಾರೆಂಬ ಆರೋಪದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ನೀಡಿದ್ದ ಸಿಬಿಐ ತನಿಖೆ ಹಿಂತೆಗೆದುಕೊಂಡಿದ್ದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಇದೇ ಸಮಯಕ್ಕೆ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಸಿಬಿಐ ತನಿಖೆ ಹಿಂತೆಗೆದುಕೊಂಡಿದ್ದರ ಬಗ್ಗೆ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವರು ಹಾಗೂ ಮುಖ್ಯಮಂತ್ರಿಯವರು, ರಾಜಕೀಯ ದುರುದ್ದೇಶದಿಂದ ಕಾನೂನು ಬಾಹಿರವಾಗಿ ಹಿಂದಿನ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ವಹಿಸಿತ್ತು ಎಂದಿದ್ದಾರೆ.

ತನಿಖೆಗೆ ವಹಿಸುವುದಕ್ಕೂ ಮುನ್ನ ವಿಧಾನಸಭಾಧ್ಯಕ್ಷರಿಂದ ಯಾವುದೇ ಅನುಮತಿ ಪಡೆದಿರಲಿಲ್ಲ ಹಾಗೂ ಅಡ್ವೋಕೇಟ್ ಜನರಲ್ ಅವರ ಅಭಿಪ್ರಾಯ ಪರಿಗಣಿಸದೇ, ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳು ತನಿಖೆಗೆ ಆದೇಶ ನೀಡಿದ್ದರು.

ಸರ್ಕಾರದ ಸೇವೆಯಲ್ಲಿದ್ದವರ ವಿರುದ್ಧ ತನಿಖೆಯಾಗಬೇಕಾದರೆ, ಸರ್ಕಾರದ ಅನುಮತಿ ಅವಶ್ಯಕ. 2019ರಲ್ಲಿ ಡಿ.ಕೆ.ಶಿವಕುಮಾರ್ ಅವರ



ವಿರುದ್ಧ ತನಿಖೆಗೆ ಅನುಮತಿಸಿದಾಗ ಅವರು ವಿಧಾನಸಭೆ ಸದಸ್ಯರಾಗಿದ್ದರು ಎಂದು ಹೇಳಿದ್ದಾರೆ.

ಸಂಪುಟ ಸಭೆಯಲ್ಲಿ ಚರ್ಚೆ ನಡೆದ ನಂತರ ಮುಖ್ಯಮಂತ್ರಿಗಳು ಲಿಖಿತವಾಗಿ ಮುಖ್ಯಕಾರ್ಯದರ್ಶಿ ಅವರಿಗೆ ಪತ್ರ ಬರೆಯದೇ ಮೌಖಿಕ ಆದೇಶ ಮಾಡಿದ್ದರು. ಮೌಖಿಕ ಆದೇಶದ ಮೇರೆಗೆ ಮುಖ್ಯಕಾರ್ಯದರ್ಶಿಗಳು ಕಾನೂನು ರೀತಿಯ ಪ್ರಕ್ರಿಯೆ ನಡೆಸಿಲ್ಲ ಎಂದು ದೂರಿದ್ದರು. ನ್ಯಾಯಾಲಯದ ತೀರ್ಮಾನದ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಸರ್ಕಾರ ಕಾನೂನು ಬಾಹಿರವಾಗಿ ಮಂಜೂರಾತಿ ನೀಡಿರುವುದು ಸರಿಯಲ್ಲ. ಅದನ್ನು ವಾಪಸ್ ಪಡೆಯುವ ತೀರ್ಮಾನ ಮಾಡಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕಳ್ಳಕಾಕರ ರಕ್ಷಣೆಗೆ ಈ ಸರ್ಕಾರ ಇದೆ ಎನ್ನುವ ರೀತಿಯಲ್ಲಿ ವರ್ತಿಸುತ್ತಿದೆ ಎಂದು ಕಿಡಿಕಾರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಕೀಲರಾಗಿ, ವಕೀಲ ಉಪನ್ಯಾಸಕರಾಗಿ ಕೆಲಸ ಮಾಡಿದ್ದಾರೆ. ಆದರೆ, ಅವರ ನೇತೃತ್ವದ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ ಸರಿಯಲ್ಲ. ಸುಪ್ರೀಂ ಕೋರ್ಟ್ ನೀಡಿರುವ ಹಲವಾರು ತೀರ್ಪುಗಳು ನಮ್ಮ ಕಣ್ಣಮುಂದೆ ಇವೆ. ಈಗಾಗಲೇ ಇದೇ ವಿಷಯವಾಗಿ ಎರಡು ಬಾರಿ ಹೈಕೋರ್ಟ್‌ನಲ್ಲಿ ಚರ್ಚೆ ವಿಚಾರಣೆ ನಡೆದು ಆದೇಶಗಳು ಬಂದಿವೆ. ಸಿಬಿಐ ತನಿಖೆ ರದ್ದು ಕೋರಿ ಡಿ.ಕೆ.ಶಿವಕುಮಾರ್ ಅವರು ಎರಡು ಸಲ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿಲ್ಲ. ಇದು ಸಿಎಂಗೆ ಗೊತ್ತಿಲ್ಲವೇ? ಎಂದು ಅವರು ಪ್ರಶ್ನಿಸಿದರು.

ಇಂಥ ಸೂಕ್ಷ್ಮ ವಿಚಾರ ನ್ಯಾಯಾಲಯದ ಮುಂದೆ ಇದ್ದಾಗ ಸರ್ಕಾರ ಏಕಾಏಕಿ ಈ ನಿರ್ಧಾರ ತೆಗೆದುಕೊಂಡಿರುವುದು ತಪ್ಪು. ಕಾನೂನನ್ನು ಧಿಕ್ಕರಿಸಿದವರು ಇವರು. ನಾವು ಕಾನೂನಿಗಿಂತ ದೊಡ್ಡವರು ಎಂಬುದನ್ನು ಅವರು ಪ್ರದರ್ಶನ ಮಾಡಿಕೊಂಡಿದ್ದಾರೆ. ಬಡವರಿಗೆ ರಕ್ಷಣೆ ಇಲ್ಲ, ಲೂಟಿ ಮಾಡುವವರ, ಕೊಳ್ಳೆ ಹೊಡೆಯುವವರ ಪರವಾಗಿ ಸರ್ಕಾರ ಇದೆ ಎಂಬುದನ್ನು ಇವರು ನಿರೂಪಿಸಿದ್ದಾರೆ ಎಂದು ಅವರು ಕಿಡಿ ಕಾರಿದರು.

ಡಿಸಿಎಂ ಅವರು ಕಳೆದ 3 (2ನೇ ಪುಟಕ್ಕೆ)

# ದೊರೆಯದ ಹೊಸ ಪಡಿತರ ಚೀಟಿ ಭಾಗ್ಯ



**ಸರ್ಕಾರಿ ಸೌಲಭ್ಯಗಳಿಗಾಗಿ ಮುಂದುವರೆದ ತೊಡಕು**

ದಾವಣಗೆರೆ, ನ. 24 - ನೂತನ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನರಿಗೆ ನಾಲ್ಕು ಗ್ಯಾರಂಟಿಗಳು ದೊರೆತಿವೆ. ಆದರೆ, ಹೊಸ ಪಡಿತರ ಚೀಟಿಯ ಭಾಗ್ಯ ಮಾತ್ರ ಇನ್ನೂ ಸಿಕ್ಕಿಲ್ಲ.

ಚುನಾವಣೆಗೆ ಮುಂಚೆ 3 ಲಕ್ಷ ಜನರು ಹೊಸ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಅದು ಇತ್ಯರ್ಥಗೊಳ್ಳುವವರೆಗೂ ಹೊಸ ಕಾರ್ಡ್‌ಗೆ ಅರ್ಜಿ ಕರೆಯುವುದಿಲ್ಲ ಎಂದು ರಾಜ್ಯ ಸರ್ಕಾರ ತಿಳಿಸಿರುವುದು ಜನರ ನಿರಾಸೆಗೂ ಕಾರಣವಾಗಿದೆ.

ಕಳೆದ ತಿಂಗಳಷ್ಟೇ ಅಳೆದೂ ತೂಗಿ ಪಡಿತರ ಚೀಟಿಗಳ ತಿದ್ದುಪಡಿಗೆ ಅವಕಾಶ ನೀಡಲಾಗಿತ್ತಾದರೂ, ಸರ್ವರ್ ಸಮಸ್ಯೆಯಿಂದಾಗಿ ಜನರು ಪರದಾಡುವುದು ತಪ್ಪಲಿಲ್ಲ. ಈಗ ಮತ್ತೆ ತಿದ್ದುಪಡಿಗೆ ಅವಕಾಶ ನೀಡಲಾಗುತ್ತದೆ ಎಂಬ ಮಾತು ಕೇಳಿ ಬರುತ್ತಿದೆ.

ಬಿ.ಪಿ.ಎಲ್. ಪಡಿತರ ಚೀಟಿ ಎಂಬುದು ಕೇವಲ ಆಹಾರಕ್ಕೆ ಸೀಮಿತವಾಗಿ ಉಳಿದಿಲ್ಲ. ಆರೋಗ್ಯ ಸೇರಿದಂತೆ ಹಲವಾರು ಸೌಲಭ್ಯಗಳಿಗೆ ಈ ಕಾರ್ಡ್ ರಹದಾರಿಯಾಗಿದೆ. ಹೀಗಾಗಿ ಜನರು ಹೊಸ ಬಿ.ಪಿ.ಎಲ್. ಕಾರ್ಡಿನ ಅವಕಾಶಕ್ಕಾಗಿ ಚಾತಕ ಪಕ್ಷಿಯಂತೆ ಕಾದು ಕುಳಿತಿದ್ದಾರೆ.

ಬಿಪಿಎಲ್ ಕಾರ್ಡ್ ಪ್ರಮಾಣಕ್ಕೂ, ಬಡನತದ ಪ್ರಮಾಣಕ್ಕೂ ರಾಜ್ಯದಲ್ಲಿ ತಾಳೆ ತಪ್ಪಿದೆ. ಸರ್ಕಾರಿ ಮಾನದಂಡಕ್ಕೆ ಒಳಪಡದವರೂ ಬಿಪಿಎಲ್ ಕಾರ್ಡ್ ಪಡೆದಿದ್ದಾರೆ. ಹೀಗಾಗಿ ಹೊಸ ಬಿಪಿಎಲ್ ಕಾರ್ಡ್ ಬಿಡುಗಡೆಗೆ ಸರ್ಕಾರ ಮೀನಾಮೇಷ ಎಣಿಸುತ್ತಿದೆ ಎಂಬ ಮಾತುಗಳೂ ಕೇಳಿ ಬಂದಿದ್ದವು. ಈಗಿರುವ ಅನರ್ಹ ಬಿ.ಪಿ.ಎಲ್. ಪಡಿತರದಾರರನ್ನು ಕೈ ಬಿಟ್ಟು ಹೊಸ ಅರ್ಹರಿಗೆ ಅವಕಾಶ ನೀಡಲಾಗುವುದು ಎಂದೂ ಹೇಳಲಾಗಿತ್ತು. ಆದರೆ, ಸದ್ಯಕ್ಕೆ ಇದಾವ ಕೆಲಸ ಆಗುವ ಲಕ್ಷಣಗಳೂ ಕಂಡು ಬರುತ್ತಿಲ್ಲ.

ವೈದ್ಯಕೀಯ ತುರ್ತು ಅಗತ್ಯವಿರುವವರು, ಚಿಕಿತ್ಸಾ ಉದ್ದೇಶಕ್ಕಾಗಿ ಮಾತ್ರ ಪಡಿತರ ಚೀಟಿ ಪಡೆಯಲು ಸರ್ಕಾರ ಅವಕಾಶ ನೀಡಿದೆ. ಆದರೆ, ಇದೊಂದು ರೀತಿ ಗಡ್ಡಕ್ಕೆ ಬೆಂಕಿ (2ನೇ ಪುಟಕ್ಕೆ)

# ಜರ್ಮನ್ ಆರ್ಥಿಕ ವ್ಯವಸ್ಥೆಯಲ್ಲಿ ಕುಸಿತ

ಫ್ರಾಂಕ್‌ಫರ್ಟ್, ನ. 24 – ಜರ್ಮನಿಯ ಆರ್ಥಿಕ ವ್ಯವಸ್ಥೆ ಇತ್ತೀಚಿನ ತಿಂಗಳುಗಳಲ್ಲಿ ಕುಸಿತ ಕಂಡಿದೆ ಹಾಗೂ ಉದ್ಯಮದ ವಿಶ್ವಾಸವೂ ಚೇತರಿಸಿಕೊಂಡಿಲ್ಲ ಎಂದು ಶುಕ್ರವಾರ ಬಿಡುಗಡೆ ಮಾಡಲಾದ ವರದಿಯೊಂದು ತಿಳಿಸಿದೆ.

ಯುರೋಪ್‌ನ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾಗಿರುವ ಜರ್ಮನಿಯು ಜುಲೈ - ಸೆಪ್ಟೆಂಬರ್ ಅವಧಿಯಲ್ಲಿ ಶೇ.0.1ರ ಕುಸಿತ ಕಂಡಿದೆ. ಹಣದುಬ್ಬರದ ಕಾರಣದಿಂದಾಗಿ ಜನರ ವಿಶ್ವಾಸ ಉಡುಗಿದ್ದು, ಖರ್ಚು ಮಾಡಲು ಹಿಂಜರಿಯುತ್ತಿದ್ದಾರೆ ಎಂದು ಜರ್ಮನಿಯ ಅಂಕಿ ಅಂಶಗಳ ಕಚೇರಿ ತಿಳಿಸಿದೆ.

ಇದು ಮುಂದಿನ ವರ್ಷದ ಬಜೆಟ್ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ. ಬಜೆಟ್ ವೆಚ್ಚದಲ್ಲಿ ತೀವ್ರ ಕಡಿತವಾಗುವ ಸಾಧ್ಯತೆಯೂ ಇದೆ. ವೆಚ್ಚದ ಮೇಲಿರುವ ಸಂವಿಧಾನಿಕ ನಿರ್ಬಂಧಗಳನ್ನು ಪಾಲಿಸಬೇಕು ಎಂದು ಜರ್ಮನಿಯ ಸಂವಿಧಾನಿಕ ನ್ಯಾಯಾಲಯ ಕಳೆದ ವಾರ ತೀರ್ಪು ನೀಡಿತ್ತು.

ಬಜೆಟ್ ಕುರಿತ ಅನಿಶ್ಚಿತತೆ ಹಾಗೂ ವೆಚ್ಚ ಕಡಿತಗಳು ಆರ್ಥಿಕತೆಯ ಸವಾಲುಗಳನ್ನು ಇನ್ನಷ್ಟು ಹೆಚ್ಚಿಸಬಹುದು. ಜರ್ಮನಿ ಈಗ ಕುಶಲ ಕಾರ್ಮಿಕರ ಕೊರತೆ ಹಾಗೂ ಅನಿಲ ವೆಚ್ಚ ಹೆಚ್ಚಳದ ಸಮಸ್ಯೆಗಳನ್ನು ಎದುರಿಸುತ್ತಿದೆ.

ಪ್ರಮುಖ ಆರ್ಥಿಕತೆಗಳಲ್ಲಿ ಈ ವರ್ಷ ಜರ್ಮನಿ ಮಾತ್ರ ಕುಸಿತ ಕಾಣಲಿದೆ ಎಂದು ಐ.ಎಂ.ಎಫ್. ತಿಳಿಸಿದೆ. ಈ ವರ್ಷದ ಕುಸಿತ (2ನೇ ಪುಟಕ್ಕೆ)

# ಡೀಪ್‌ಫೇಕ್ ಕಂಡು ಬಂದರೆ ಜಾಲತಾಣಗಳ ವಿರುದ್ಧ ಕ್ರಮ

**ಕೇಂದ್ರ ಸಚಿವ ಚಂದ್ರಶೇಖರ್**

ನವದೆಹಲಿ, ನ. 24 – ಡೀಪ್‌ಫೇಕ್ ರೀತಿಯ ಆಕ್ಷೇಪಾರ್ಹ ಕೃತ್ಯ ನಡೆದಲ್ಲಿ ಸಾಮಾಜಿಕ ಜಾಲತಾಣಗಳ ವಿರುದ್ಧ ನಾಗರಿಕರು ಎಫ್.ಐ.ಆರ್. ದಾಖಲಿಸಲು ಕೇಂದ್ರ ಸರ್ಕಾರ ಸಹಕಾರ ನೀಡಲಿದೆ.


ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಎಲೆಕ್ಟ್ರಾನಿಕ್ಸ್ ಹಾಗೂ ಐ.ಟಿ. ಅಧೀನ ಸಚಿವ ರಾಜೀವ್ ಚಂದ್ರಶೇಖರ್, ಸಾಮಾಜಿಕ ಜಾಲತಾಣಗಳು ಐ.ಟಿ. ನಿಯಮ ಉಲ್ಲಂಘಿಸಿದ ಬಗ್ಗೆ ತಿಳಿಸಲು ಸರ್ಕಾರ ವೇದಿಕೆಯೊಂದನ್ನು ರೂಪಿಸಲಿದೆ ಎಂದಿದ್ದಾರೆ.

ಐ.ಟಿ. ನಿಯಮಗಳ ಉಲ್ಲಂಘನೆಯ ಬಗ್ಗೆ ಸುಲಭವಾಗಿ ತಿಳಿಸಲು ಸಚಿವಾಲಯ ಜನರಿಗೆ ಸಹಕಾರ ನೀಡಲಿದೆ. ಅವರು ಎಫ್.ಐ.ಆರ್. ದಾಖಲಿಸಲೂ ಸಹಕರಿಸಲಿದೆ ಎಂದು ಸಚಿವರು ತಿಳಿಸಿದ್ದಾರೆ. ಐ.ಟಿ. ನಿಯಮಗಳ (4ನೇ ಪುಟಕ್ಕೆ)

# ಚೀನಾದಲ್ಲಿ ಹೆಚ್9ಎನ್2 ಹರಡಿದ ಬಗ್ಗೆ ನಿಗಾ

ನವದೆಹಲಿ ನ. 24 – ಚೀನಾದಲ್ಲಿ ಹೆಚ್9ಎನ್2 ಫ್ಲು ಸೋಂಕು ಹರಡಿರುವುದರಿಂದ ಉಂಟಾಗಿರುವ ಪರಿಸ್ಥಿತಿಯ ಮೇಲೆ ನಿಗಾ ವಹಿಸಲಾಗಿದೆ. ಆದರೆ, ಈ ಸೋಂಕಿನಿಂದ ಆಗುವ ಅಪಾಯ ಕಡಿಮೆ ಎಂದು ಭಾರತ ಸರ್ಕಾರ ತಿಳಿಸಿದೆ.

ಚೀನಾದಲ್ಲಿ ಹರಡಿರುವ ಹೆಚ್9ಎನ್2 ಹಕ್ಕಿ ಜ್ವರ ಮತ್ತು ಆ ದೇಶದ ಕೆಲ ಭಾಗಗಳಲ್ಲಿ ಹೆಚ್ಚಿನ ಸೋಂಕು ಕಂಡು ಬಂದಿರುವುದರಿಂದ ಭಾರತಕ್ಕೆ ಇರುವ ಅಪಾಯ ಕಡಿಮೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.



ಚೀನಾದ ಕೆಲ ಭಾಗಗಳಲ್ಲಿ ಉಸಿರಾಟ ಸಮಸ್ಯೆ ತೀವ್ರವಾಗಿರುವ ವರದಿಗಳು ಬಂದಿದ್ದವು. ಈ ಬಗ್ಗೆ ವಿಶ್ವ ಆರೋಗ್ಯ ಸಂಘಟನೆ ವಿವರಗಳನ್ನೂ ಕೇಳಿತ್ತು.

ಚೀನಾದಲ್ಲಿ ಸಾಮಾನ್ಯ ಉಸಿರಾಟದ ಸಮಸ್ಯೆ ಕಂಡು ಬಂದಿದೆ. ಅಸಾಮಾನ್ಯ ಸೋಂಕು ಇಲ್ಲವೇ ವಿವರಿಸಲಾಗದ ವೈದ್ಯಕೀಯ ಸಮಸ್ಯೆಯೇನೂ ಕಂಡು ಬಂದಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಚೀನಾದಲ್ಲಿ ಅಕ್ಟೋಬರ್‌ನಲ್ಲಿ ಹೆಚ್9ಎನ್2 ಹಕ್ಕಿ ಜ್ವರದ ಸೋಂಕು ಕಂಡು ಬಂದಿತ್ತು. ಈ ಬಗ್ಗೆ ಕೇಂದ್ರ ಆರೋಗ್ಯ ಸೇವೆಗಳ ಪ್ರಧಾನ ನಿರ್ದೇಶನಾಲಯ ಸಭೆ ನಡೆಸಿ ಅಗತ್ಯ ಕ್ರಮಗಳನ್ನು ತೆಗೆದುಕೊಂಡಿದೆ.

ಈ ಹಕ್ಕಿ ಜ್ವರ ಮಾನವರಿಂದ ಮಾನವರಿಗೆ ಹರಡುವ ಅಪಾಯ ಕಡಿಮೆ ಇದೆ. ಇದರಿಂದ ಸಾವಿನ ಪ್ರಮಾಣವೂ ಕಡಿಮೆ. ಭಾರತ ಯಾವುದೇ ತುರ್ತು ಆರೋಗ್ಯ ಸ್ಥಿತಿಯನ್ನು ಎದುರಿಸಲು ಸಿದ್ಧವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

# ರಾಜ್ಯಪಾಲರು ಮಸೂದೆಗಳ ಬಾಕಿ ಉಳಿಸಿಕೊಳ್ಳುವಂತಿಲ್ಲ : ಸುಪ್ರೀಂ

ನವದೆಹಲಿ, ನ. 24 – ರಾಜ್ಯಪಾಲರು ಮಸೂದೆಗಳನ್ನು ಸುದೀರ್ಘ ಕಾಲ ಅನುಮತಿ ನೀಡದೇ ಬಾಕಿ ಉಳಿಸಿಕೊಳ್ಳಲು ಅವಕಾಶ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಸೂದೆಗಳಿಗೆ ಅಂಗೀಕಾರ ನೀಡುವ ಬಗ್ಗೆ ಸಂವಿಧಾನದ ಮೂಲಕ ಅಧಿಕಾರ ನೀಡಲಾಗಿದೆ. ಆದರೆ, ಅದನ್ನು ರಾಜ್ಯಗಳ ಶಾಸನಾತ್ಮಕ ಪ್ರಕ್ರಿಯೆಗೆ ಅಡ್ಡಿಪಡಿಸಲು ಬಳಸಲಾಗದು ಎಂದು ನ್ಯಾಯಾಲಯ ತಿಳಿಸಿದೆ.

ರಾಜ್ಯಪಾಲರು ಅನಿರ್ಬಂಧಿತವಾಗಿ ವಿವೇಚನಾ ಅಧಿಕಾರ ಬಳಸಿಕೊಳ್ಳುವುದು ಎಂದರೆ, ಶಾಸನಾತ್ಮಕ ಪ್ರಕ್ರಿಯೆ ವಿರುದ್ಧ ವೀಟೋ ಚಲಾಯಿಸಲು ಅಧಿಕಾರ ನೀಡಿದಂತಾಗುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ ಪರ್ಡಿವಾಲಾ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ.

ರಾಜ್ಯಪಾಲರು ಚುನಾಯಿತರಲ್ಲದ ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ಅವರಿಗೆ ಕೆಲ ಸಂವಿಧಾನಿಕ ಅಧಿಕಾರಗಳನ್ನು ನೀಡಲಾಗಿದೆ. ಆದರೆ, ಈ ಅಧಿಕಾರವನ್ನು ರಾಜ್ಯ ಶಾಸಕಾಂಗಗಳ ಸಾಮಾನ್ಯ ಕಾನೂನು ರೂಪಿಸುವ ಪ್ರಕ್ರಿಯೆಗೆ ವಿರುದ್ಧವಾಗಿ ಬಳಸಲಾಗದು ಎಂದು ನ್ಯಾಯಾಲಯ ಹೇಳಿದೆ.

ಸಂವಿಧಾನದ 200ನೇ ವಿಧಿಯ ಅನ್ವಯ ಮಸೂದೆಯೊಂದನ್ನು ರಾಜ್ಯಪಾಲರು ಬಾಕಿ (4ನೇ ಪುಟಕ್ಕೆ)

## ಕತಾರ್ : ಮರಣ ದಂಡನೆ ವಿರುದ್ಧದ ಮನವಿ ಸ್ವೀಕಾರ

ನವದೆಹಲಿ, ನ. 24 – ಎಂಟು ಜನ ಭಾರತೀಯರಿಗೆ ವಿಧಿಸಲಾಗಿದ್ದ ಮರಣದಂಡನೆಯ ವಿರುದ್ಧ ಭಾರತ ಸರ್ಕಾರ ದಾಖಲಿಸಿದ್ದ ಮನವಿಯನ್ನು ಕತಾರ್ ನ್ಯಾಯಾಲಯ ಸ್ವೀಕರಿಸಿದೆ. ಭಾರತೀಯ ನೌಕಾ ಪಡೆಯ ಎಂಟು ಮಾಜಿ ಉದ್ಯೋಗಿಗಳಿಗೆ ಕತಾರ್‌ನಲ್ಲಿ ಮರಣ ದಂಡನೆ ವಿಧಿಸಲಾಗಿತ್ತು. ಈ ಶಿಕ್ಷೆಯ ವಿರುದ್ಧ ಭಾರತ ದಾಖಲಿಸಿದ್ದ ಮನವಿಯನ್ನು ಅಂಗೀಕರಿಸಲಾಗಿದೆ. ಶೀಘ್ರದಲ್ಲೇ ವಿಚಾರಣೆ ನಡೆಸಲಾಗುವುದು ಎಂದು ತಿಳಿಸಲಾಗಿದೆ. ಕಳೆದ ವಾರ ಭಾರತ ಮರಣ ದಂಡನೆಯ ವಿರುದ್ಧ ಅರ್ಜಿ ಸಲ್ಲಿಸಿತ್ತು.

# ಪಾಲಿಕೆ: ಇಂದಿನಿಂದ ಮೂರು ದಿನ ರಾಜ್ಯೋತ್ಸವ

**ಅದ್ದೂರಿ ಆಚರಣೆ**
**ಪ್ರತಿ ದಿನ ಸಂಜೆ ರಸಮಂಜರಿ**
**105 ಸಾಧಕರಿಗೆ ಸನ್ಮಾನ**

ದಾವಣಗೆರೆ, ನ.24- ಮಹಾನಗರ ಪಾಲಿಕೆ, ಕನ್ನಡ ಪರ ಸಂಘ-ಸಂಸ್ಥೆಗಳು ಹಾಗೂ ಪತ್ರಕರ್ತರ ಸಂಯುಕ್ತಾಶ್ರಯದಲ್ಲಿ 68ನೇ ಕರ್ನಾಟಕ ರಾಜ್ಯೋತ್ಸವವನ್ನು ಇದೇ ನ.25ರಿಂದ ಮೂರು ದಿನಗಳ ಕಾಲ ಪಾಲಿಕೆ ಆವರಣದಲ್ಲಿರುವ ಶ್ರೀಮತಿ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಹಾನಗರ ಪಾಲಿಕೆ ಸದಸ್ಯ ಎ.ನಾಗರಾಜ್ ತಿಳಿಸಿದ್ದಾರೆ.

ಪಾಲಿಕೆಯ ಮೇಯರ್ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ನ.25ರ ಇಂದು ಬೆಳಿಗ್ಗೆ 9.30ಕ್ಕೆ ಮೇಯರ್ ವಿನಾಯಕ್ ಪೈಲ್ವಾನ್ ಕನ್ನಡ ಧ್ವಜಾರೋಹಣ ನೆರವೇರಿಸಲಿದ್ದಾರೆ. ನಂತರ ಪಾಲಿಕೆ ಆವರಣದಿಂದ ಕನ್ನಡ ತಾಯಿ ಶ್ರೀ ಭುವನೇಶ್ವರಿಯ ಭವ್ಯ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಚಾಲನೆ ನೀಡಲಿದ್ದಾರೆ ಎಂದರು.

ಸಂಜೆ 5.30ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಕನ್ನಡ ತಾಯಿ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಮೇಯರ್ ವಿನಾಯಕ ಪೈಲ್ವಾನ್ ಅಧ್ಯಕ್ಷತೆ ವಹಿಸಲಿದ್ದು, ನಿವೃತ್ತ ಪ್ರಾಧ್ಯಾಪಕ ಡಾ|| ಭಿಕ್ಷಾವರ್ತಿಮಠ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದರು.

ನ.26ರ ಸಂಜೆ 5.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಸಂಸದ ಜಿ.ಎಂ.ಸಿದ್ದೇಶ್ವರ ಉದ್ಘಾಟಿಸಲಿದ್ದು, ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್ ಸಾಬ್ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಕನ್ನಡ ಅಧ್ಯಾಪಕ ವಿಜಯ ಸೊಲ್ಲಾಪುರ ವಿಶೇಷ ಉಪಾನ್ಯಾಸ ನೀಡಲಿದ್ದಾರೆ ಎಂದರು.

ನ.27ರ ಸಂಜೆ 5.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಕನ್ನಡ ತಾಯಿ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ. ಸಾಹಿತಿ ಡಾ.ರಂಜಾನ್ ದರ್ಗಾ, ಧರ್ಮಗುರು ಜೈನಿ ಉಸ್ತಾದ್ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಇದೇ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಕ್ರೀಡಾಪಟು ಹಾಗೂ ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್ ಮತ್ತು ನಿವೃತ್ತ ಪಾಲಿಕೆ ಆಯುಕ್ತ ಬಿ. ಹೆಚ್.ನಾರಾಯಣಪ್ಪ ಅವರಿಗೆ ಗೌರವ ಅಭಿನಂದನೆ ಸಲ್ಲಿಸಲಾಗುವುದು.

ಮೂರು ದಿನಗಳ ಕಾರ್ಯಕ್ರಮಕ್ಕೂ ಮುನ್ನ ಸ್ಥಳೀಯ ಹಾಗೂ ವಿವಿಧ ನಗರಗಳ ತಂಡಗಳಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದು ನಾಗರಾಜ್ ಹೇಳಿದರು. (2ನೇ ಪುಟಕ್ಕೆ)


# ಕದನ ವಿರಾಮದ ನಂತರ ಇಸ್ರೇಲ್ ಒತ್ತೆಯಾಳುಗಳ ಬಿಡುಗಡೆ

ಜೆರುಸಲೇಂ, ನ. 24 – ಕದನ ವಿರಾಮ ಆರಂಭವಾದ ನಂತರ ಹಮಾಸ್ ಸಂಘಟನೆಯು ಒತ್ತೆಯಾಳುಗಳ ಮೊದಲ ತಂಡ ಬಿಡುಗಡೆ ಮಾಡಿದೆ. ಇವರಲ್ಲಿ 13 ಇಸ್ರೇಲ್ ನಾಗರಿಕರೂ ಸೇರಿದ್ದಾರೆ.

ಥೈಲ್ಯಾಂಡ್‌ನ 12 ನಾಗರಿಕರನ್ನೂ ಬಿಡುಗಡೆ ಮಾಡಲಾಗಿದೆ. 240 ಜನರು ಒತ್ತೆಯಾಳುಗಳಿದ್ದು, ಇವರ ಪೈಕಿ 50 ಜನರನ್ನು ಬಿಡುಗಡೆ ಮಾಡುವುದಾಗಿ ಹಮಾಸ್ ತಿಳಿಸಿದೆ. ಇದಕ್ಕೆ ಪ್ರತಿಯಾಗಿ ಪ್ಯಾಲೆಸ್ತೇನಿನ 150 ಬಂಧಿತರನ್ನು ಇಸ್ರೇಲ್ ಬಿಡುಗಡೆ ಮಾಡಲಿದೆ. ಕದನ ವಿರಾಮದ ನಂತರ ಇಂಧನ ಹಾಗೂ ಅಡುಗೆ ಅನಿಲಗಳನ್ನು ಹೊಂದಿರುವ ನಾಲ್ಕು ಟ್ಯಾಂಕರ್‌ಗಳನ್ನು ಗಾಜಾ ಪಟ್ಟಿಗೆ ಈಜಿಪ್ಟ್ ಮೂಲಕ ಕಳಿಸಲಾಗಿದೆ. ಕದನ ವಿರಾಮ ಮುಗಿಯುವವರೆಗೆ ಪ್ರತಿದಿನ 1.30 ಲಕ್ಷ ಲೀಟರ್ ಇಂಧನ ಕಳಿಸುವುದಾಗಿ ಇಸ್ರೇಲ್ ಹೇಳಿದೆ.

# ಪ್ರೀತಿಯ ಕೊರತೆಯಿಂದ ಹಳಸುತ್ತಿರುವ ಸಂಬಂಧಗಳು

**ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ**



ದಾವಣಗೆರೆ, ನ. 24- ದಂಪತಿ ನಡುವಿನ ಪ್ರೀತಿಯ ಕೊರತೆಯಿಂದಾಗಿ ಸಂಬಂಧಗಳು ಹಳಸುತ್ತಿವೆ. ಹೀಗಾಗಿ ನವ ದಂಪತಿಗಳು ಪರಸ್ಪರ ಪ್ರೀತಿ, ಸಹನೆ ಸಹ ಬಾಳ್ವೆ ನಡೆಸುವ ಮೂಲಕ ಸಂಸಾರವನ್ನು ಸ್ವರ್ಗವಾಗಿಸಿಕೊಳ್ಳುವಂತೆ ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಸಲಹೆ ನೀಡಿದರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಇಂದು ಹಮ್ಮಿಕೊಂಡಿದ್ದ ಸರ್ವಧರ್ಮೀಯರ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ದಂಪತಿಗಳ ನಡುವಿನ ಅಹಂಕಾರ, ಸಂಶಯಗಳಿಂದಾಗಿ ಸಂಸಾರಗಳು, ವಿವಾಹಗಳು ಮುರಿದು ಬೀಳುತ್ತಿವೆ. ಸತಿ-ಪತಿಗಳಲ್ಲಿನ ಸ್ವಪ್ರತಿಷ್ಠೆಯಿಂದಾಗಿ ಕೌಟುಂಬಿಕ ಕಲಹಗಳು ಉಂಟಾಗುತ್ತಿವೆ ಎಂದರು.

ದಂಪತಿಗಳು ಸುಖವಾಗಿ, ಅನ್ಯೋನ್ಯವಾಗಿ ಬಾಳಬೇಕಾದರೆ ಅವರಿಬ್ಬರ ನಡುವೆ ಪರಸ್ಪರ ಪ್ರೀತಿ ಎಂಬ ಸಂಪತ್ತು ಇದ್ದಾಗ ಮಾತ್ರ ಸಂಸಾರ ಸ್ವರ್ಗವಾಗಲು ಸಾಧ್ಯ ಎಂದು ಹೇಳಿದರು.

ಸಾಂಸಾರಿಕ ಜೀವನ ಸುಖದಿಂದ ಕೂಡಿರಲು ಭೌತಿಕ ಸಿರಿ-ಸಂಪತ್ತಿಗಿಂತ ಮನಸ್ಸಿನ ಶ್ರೀಮಂತಿಕೆ ಅಗತ್ಯ. ಸಾಂಸಾರಿಕ ಜೀವನಕ್ಕೆ ಕಾಲಿರಿಸುತ್ತಿರುವ ದಂಪತಿಗಳ ನಡುವೆ ಪ್ರೀತಿ ಹೆಚ್ಚಾಗಲಿ ಎಂದು ಶುಭ ಹಾರೈಸಿದರು. (4ನೇ ಪುಟಕ್ಕೆ)

**ಕೈಲಾಸ ಸಮಾರಾಧನೆ ಆಹ್ವಾನ**



ಹರಿಹರ ತಾಲ್ಲೂಕು ದೇವರಬೆಳಕೆರೆ ಗ್ರಾಮದ ವಾಸಿ
**ಮಡಿವಾಳರ ಶ್ರೀ ಎಂ. ಗುಡ್ಡಪ್ಪ**
ಇವರು, ದಿನಾಂಕ : 18.11.2023ರ ಶನಿವಾರ ಸಂಜೆ 5.30ಕ್ಕೆ ನಿಧನ ಹೊಂದಿದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
ದಿನಾಂಕ : 26.11.2023ನೇ ಭಾನುವಾರ ಬೆಳಿಗ್ಗೆ : 10.00 ಗಂಟೆಗೆ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದೇ ಆಹ್ವಾನವೆಂದು ಭಾವಿಸಿ, ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತ ಕುಟುಂಬ ವರ್ಗ :
ಮೃತರ ಧರ್ಮಪತ್ನಿ : ಶ್ರೀಮತಿ ಲೋಲಾಕ್ಷಮ್ಮ ಮತ್ತು ಮಕ್ಕಳು
ಹಾಗೂ ಬಂಧು-ಮಿತ್ರರು ದೇವರಬೆಳಕೆರೆ, ಹರಿಹರ ತಾ||, ಫೋ.:63627 84869

# ಮಳಲಿ ಸಂಸ್ಥಾನ ಮಠದಲ್ಲಿ ನಾಳೆ ಗುರು ಪಟ್ಟಾಧಿಕಾರ ರಜತ ಮಹೋತ್ಸವ



ರಿಪ್ಪನ್‌ಪೇಟೆ, ನ. 24 - ತೀರ್ಥಹಳ್ಳಿ ತಾಲ್ಲೂಕು ಶ್ರೀಮದ್ ರಂಭಾಪುರಿ ಖಾಸಾ ಶಾಖಾ ಮಹಾಸಂಸ್ಥಾನ ಮಳಲಿ ಮಠದಲ್ಲಿ ನಾಡಿದ್ದು ದಿನಾಂಕ 26ರ ರವಿವಾರ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಡಾ. ವೀರ ಸೋಮೇಶ್ವರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಡಾ. ಗುರುನಾಗ ಭೂಷಣ ಶಿವಾಚಾರ್ಯ ಸ್ವಾಮಿಗಳವರ ಶ್ರೀ ಗುರು ಪಟ್ಟಾಧಿಕಾರ ರಜತ ಮಹೋತ್ಸವ ಹಾಗೂ ಕಾರ್ತಿಕ ದೀಪೋತ್ಸವ ಧರ್ಮ ಸಮಾರಂಭ ಜರುಗುವುದು.

ಅ.ಭಾ.ವೀರಶೈವ ಶಿವಾಚಾರ್ಯ ಸಂಸ್ಥೆ ಗೌರವಾಧ್ಯಕ್ಷ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಲಿದ್ದು, ಅಧ್ಯಕ್ಷ ಮುಕ್ತಿಮಂದಿರ ಕ್ಷೇತ್ರದ ಶ್ರೀ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸುವರು.

ಬಂಕಾಪುರ ಅರಳೆಲೆ ಹಿರೇಮಠದ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಸದಾಶಯ ನುಡಿಯುವರು.

ಮಳಲಿಯ ಡಾ. ಗುರುನಾಗಭೂಷಣ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭವನ್ನು ಸಂಸದ ಬಿ.ವೈ. ರಾಘವೇಂದ್ರ ಉದ್ಘಾಟಿಸುವರು. ಮಾಜಿ ಸಚಿವ, ಶಾಸಕ ಆರಗ ಜ್ಞಾನೇಂದ್ರ 'ಸುದ್ದಿ ಸಂಪದ' ಬಿಡುಗಡೆಗೊಳಿಸುವರು. ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ ದಿನದರ್ಶಿಕೆ ಬಿಡುಗಡೆ ಮಾಡುವರು. ಮುಖ್ಯ ಅತಿಥಿಗಳಾಗಿ ಶಾಸಕ ಬೇಳೂರು ಗೋಪಾಲಕೃಷ್ಣ, ಮಾಜಿ ಸಚಿವ ಕಿಮ್ಮನೆ ರತ್ನಾಕರ, ಹರತಾಳು ಹಾಲಪ್ಪ, ಡಾ.ಆರ್.ಎಂ. ಮಂಜುನಾಥಗೌಡ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ.

ಅಂದು ಬೆಳಿಗ್ಗೆ 8.30ಕ್ಕೆ ಲೋಕ ಕಲ್ಯಾಣಾರ್ಥವಾಗಿ ಪ್ರದೇಶಾಭಿವೃದ್ಧಿಗಾಗಿ ಶ್ರೀ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಮಹಾಪೂಜೆ ನಡೆಯುವುದು.

## ದೊರೆಯದ ಹೊಸ ಪಡಿತರ ಚೀಟಿ ಭಾಗ್ಯ

**(1ನೇ ಪುಟದಿಂದ)** ಹತ್ತಿದಾಗ ಬಾವಿ ತೋಡಲು ಹೇಳಿದಂತಾಗಿದೆ. ಬಿಪಿಎಲ್ ಕಾರ್ಡ್ ಇಲ್ಲದವರೂ ಸರ್ಕಾರಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಉಚಿತವಾಗಿ ಪಡೆಯಬಹುದು. ಆದರೆ, ಬಿ.ಪಿ.ಎಲ್. ಕಾರ್ಡ್ ಹೊಂದಿರುವವರಿಗೆ ಹೋಲಿಸಿದರೆ ಕೆಲ ಶುಲ್ಕಗಳನ್ನು ಪಾವತಿಸಬೇಕಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ತುರ್ತು ವೈದ್ಯಕೀಯ ಅಗತ್ಯ ಹೊರತು ಪಡಿಸಿದರೆ, ಉಳಿದ ಚಿಕಿತ್ಸೆಗಾಗಿ ಜನರು ಹಣ ಪಾವತಿಸಲೇಬೇಕಾಗುತ್ತದೆ ಎಂದೂ ಅವರು ತಿಳಿಸಿದ್ದಾರೆ.

ಆಂಧ್ರ ಪ್ರದೇಶದ ಮಾದರಿಯಲ್ಲಿ ವೈದ್ಯಕೀಯ ಚಿಕಿತ್ಸೆ ಉದ್ದೇಶಕ್ಕಾಗಿ ಮತ್ತು ಪಡಿತರ ಪಡೆಯಲು ಬಯಸದವರಿಗಾಗಿ ಪ್ರತ್ಯೇಕ ಕಾರ್ಡ್ ನೀಡುವ ಬಗ್ಗೆ ಪರಿಶೀಲಿಸಲಾಗುವುದು ಎಂದೂ ರಾಜ್ಯ ಸರ್ಕಾರ ತಿಳಿಸಿತ್ತು. ಆದರೆ, ಇದುವರೆಗೂ ಆ ಬಗ್ಗೆ ಯಾವುದೇ ಆದೇಶ ಹೊರ ಬಂದಿಲ್ಲ.

# ಶ್ರೀಶೈಲ ವಾಗೀಶ ಪಂಡಿತಾರಾಧ್ಯರ ಸೇವೆ ಶ್ಲಾಘನೀಯ

### ಹರಿಹರದ ಎಸ್.ಜೆ.ವಿ.ಪಿ. ಕಾಲೇಜಿನ ಕಾರ್ಯಕ್ರಮದಲ್ಲಿ ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ. ಕೊಟ್ರೇಶ್



ಹರಿಹರ, ನ,24- ಭರತ ಭೂಮಿಯಲ್ಲಿ ಮಾನವನ ಶ್ರೇಯಸ್ಸಿಗಾಗಿ ನಾಡಿನ ಅನೇಕ ಧಾರ್ಮಿಕ ಸಂಸ್ಥೆಗಳು ತಮ್ಮದೇ ಆದ ಕೊಡುಗೆ ನೀಡಿದ್ದು, ಆ ನಿಟ್ಟಿನಲ್ಲಿ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮನುಕುಲದ ಉದ್ಧಾರ ಬಯಸಿ ವಸುದೈವ ಕುಟುಂಬದ ಪರಿಕಲ್ಪನೆಯ ಪೂರಕ ಕಾರ್ಯಗಳು ಮಾಡಿರುವುದು ಶ್ಲಾಘನೀಯ ಎಂದು ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ. ಕೊಟ್ರೇಶ್ ಅಭಿಪ್ರಾಯಪಟ್ಟರು.

ನಗರದ ಎಸ್.ಜೆ.ವಿ.ಪಿ. ಕಾಲೇಜಿನ ಎಂ.ಬಿ. ಗುರುಸಿದ್ದಸ್ವಾಮಿ ಸಭಾಂಗಣದಲ್ಲಿ ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಇವರ ಸಹಯೋಗದೊಂದಿಗೆ ನಡೆದ ಶ್ರೀಶೈಲ ಜಗದ್ಗುರು ಗಳವರ 51ನೇ ಜನ್ಮದಿನ ಮತ್ತು ಕನ್ನಡ ರಾಜ್ಯೋತ್ಸವ ಪ್ರಯುಕ್ತ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಮತ್ತು ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮನುಷ್ಯನಿಗೆ ಸಂಸ್ಕಾರವೆಂಬ ಅರಿವನ್ನು ನೀಡಿ ಅಧ್ಯಾತ್ಮಿಕ ತಳಹದಿಯ ಮೇಲೆ ಜೀವನ ನಡೆಸುವ ಪರಿಧಿ ರೂಪಿಸಿಕೊಳ್ಳಲು ಹಾಗೂ ಉತ್ತಮ ವ್ಯಕ್ತಿತ್ವ ಸಾಧನೆಗೆ ಬೇಕಾದ ಶಿಕ್ಷಣವನ್ನು, ಜಾತಿ, ಮತ, ಪಂಥ ಭೇದಗಳಿಲ್ಲದೆ, ಲೋಕಕಲ್ಯಾಣಕ್ಕಾಗಿ ವಿದ್ಯಾಮಂದಿರಗಳನ್ನು ಸ್ಥಾಪಿಸಿ ಶಿಕ್ಷಣವನ್ನು ನೀಡಿದ ಶ್ರೇಯಸ್ಸು ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಸಲ್ಲುತ್ತದೆ ಎಂದು ಹೇಳಿದರು.

ಎಸ್.ಜೆ.ವಿ.ಪಿ ಕಾಲೇಜು ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ ಮಾತನಾಡಿ, ಲಿಂ. ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ವಿವಿಧತೆಯಲ್ಲಿ ಏಕತೆ ಸಾರಿದ ಮಹಾತ್ಮರು. ಹರಿಹರದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠ ತೆರೆಯುವುದರೊಂದಿಗೆ ಸಹಸ್ರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಟ್ಟ ಪರಿಣಾಮ, ಆ ವಿದ್ಯಾರ್ಥಿಗಳು ಉನ್ನತ ಸ್ಥಾನ ಅಲಂಕರಿಸಲು ಅನುಕೂಲವಾಗಿದೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಮಾತನಾಡಿ, ಸಾಹಿತ್ಯದ ಆಸಕ್ತಿಯನ್ನು ಬೆಳೆಸಿಕೊಂಡವರು ತಮ್ಮ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ನಡೆಸುತ್ತಾರೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಎಂ. ಚಿದಾನಂದ ಕಂಚಿಕೇರಿ ಮಾತನಾಡಿ, ವಿದ್ಯಾರ್ಥಿಗಳು ಶಿಸ್ತು, ಸಂಯಮ, ಬದ್ದತೆ, ತಾಳ್ಮೆ, ಏಕಾಗ್ರತೆ ಇವು ಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಗಿ ಎಂದು ಕರೆ ನೀಡಿದರು.

ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಎಸ್.ಜೆ.ವಿ.ಪಿ. ಕಾಲೇಜು ಪ್ರಧಾನ ಕಾರ್ಯದರ್ಶಿ ಆರ್.ಟಿ. ಪ್ರಶಾಂತ್, ಹಿರಿಯ ಕ್ರೀಡಾಪಟು ಹೆಚ್.ನಿಜಗುಣ, ಪತ್ರಕರ್ತ ಹೆಚ್.ಸಿ. ಕೀರ್ತಿಕುಮಾರ್ ಮಾತನಾಡಿ

ಈ ವೇಳೆ ಉದ್ಯಮಿ ಸಿ.ಎನ್. ಹುಲುಗೇಶ್, ಬಂಡೇರ್ ತಿಮ್ಮಣ್ಣ ಮಾತನಾಡಿದರು. ಪ್ರಾಂಶುಪಾಲ ಡಾ. ಬಿ. ಆರ್ ಗುರುದೇವ ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು ಎಂಬ ಹಾಡನ್ನು ಹಾಡಿ ಕಾರ್ಯಕ್ರಮಕ್ಕೆ ಮೆರಗು ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಈಶಪ್ಪ ಬೂದಿಹಾಳ, ಪ್ರಾಂಶುಪಾಲ ಡಾ. ಬಿ.ಆರ್. ಗುರುದೇವ, ಪ್ರಾಂಶುಪಾಲೆರಾದ ಶಿವಗಂಗಮ್ಮ, ಸಹಾಯಕ ಪ್ರಾಧ್ಯಾಪಕರಾದ ಡಾ ಎಂ.ವಿ. ಹರ್ಷಲತಾ, ಉಪನ್ಯಾಸಕರಾದ ರಬಿಯಾ ಬಸ್ರಿ ಇತರರು ಹಾಜರಿದ್ದರು.

ಜಿ.ವಿ. ಸೃಷ್ಟಿ ಪ್ರಾರ್ಥಿಸಿದರು. ಈಶಪ್ಪ ಬೂದಿಹಾಳ ಸ್ವಾಗತಿಸಿದರು. ಆರ್. ದೀಪಾ ನಿರೂಪಿಸಿದರು. ಡಾ ಎಂ.ವಿ. ಹರ್ಷಲತಾ ವಂದಿಸಿದರು.

# ನಾಡು ಶತಕೋಟಿ ಸಂಭ್ರಮ ಆಚರಿಸುತ್ತಿದೆ : ಸಿಎಂ




ಬೆಂಗಳೂರು, ನ. 24 - ರಾಜ್ಯದಲ್ಲಿ ಗ್ಯಾರಂಟಿ ಯೋಜನೆ ಜಾರಿ ಆಗುವುದಿಲ್ಲ, ಜಾರಿ ಆದರೆ ರಾಜ್ಯ ಆರ್ಥಿಕ ದಿವಾಳಿ ಆಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೇರಿ, ಬಿಜೆಪಿ ನಾಯಕರು ಆಡಿಕೊಂಡಿದ್ದರು. ಈಗ ನಾಡು ಶತಕೋಟಿ ಸಂಭ್ರಮ ಆಚರಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಾರಿಗೆ ಇಲಾಖೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಶಕ್ತಿ ಯೋಜನೆಯ ಶತಕೋಟಿ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಅಪಘಾತ ರಹಿತ ಚಾಲಕರಿಗೆ ಚಿನ್ನದ ಪದಕ ಪ್ರದಾನ ಮಾಡಿ ಮಾತನಾಡಿದರು.

ದೇಶದ ಯಾವ ಸರ್ಕಾರಗಳೂ ಹಿಂದೆಂದೂ ಮಾಡದ ಸಾಧನೆಯನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಆರೇ ತಿಂಗಳಲ್ಲಿ ಸಾಧಿಸಿ ತೋರಿಸಿದೆ. ಇದು ಕಣ್ಣ ಮುಂದಿದೆ. ಆದರ ದಾಖಲೆ ಕಣ್ಣ ಮುಂದಿದೆ. ಬಿಜೆಪಿಯವರು ನಿರ್ಲಜ್ಜವಾಗಿ ಸುಳ್ಳು ಹೇಳುವುದನ್ನು ನಿಲ್ಲಿಸಬೇಕು ಎಂದರು.

ಜೂನ್ 11 ಕ್ಕೆ ಶಕ್ತಿ ಯೋಜನೆ ಜಾರಿ ಆಯಿತು. ನವೆಂಬರ್ 23 ಕ್ಕೆ 100 ಕೋಟಿ 47 ಲಕ್ಷ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ. ದಾಖಲೆಗಳು ಕಣ್ಣ ಮುಂದಿವೆ. ಆದರೂ ಈ ಬಿಜೆಪಿ ನಾಯಕರು ಯಾಕಿಷ್ಟು ಸುಳ್ಳು ಹೇಳುತ್ತಾರೆ? ಎಂದು ಪ್ರಶ್ನಿಸಿದರು.

# ಕುಣಿಬೆಳಕೆರೆ : ಸಂಭ್ರಮದ ದೊಡ್ಡಎಡೆ ಜಾತ್ರೆ



ಮಲೇಬೆನ್ನೂರು, ನ.24- ಕುಣಿಬೆಳಕೆರೆ ಗ್ರಾಮದ ಆರಾಧ್ಯ ದೈವ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ದೊಡ್ಡಎಡೆ ಜಾತ್ರೆಯು ಶುಕ್ರವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಬೆಳಿಗ್ಗೆ ವಿಶೇಷ ಪೂಜೆ, ಸಾಮೂಹಿಕ ವಿವಾಹ, ಜವಳ ಸೇರಿದಂತೆ ಇನ್ನೂ ಅನೇಕ ಸೇವೆಗಳ ನಡೆದವು. ನಂತರ ಬೀರಪ್ಪನಿಗೆ ಈರಗಾರರಿಂದ ದೊಡ್ಡಎಡೆ ಪೂಜೆ ಶ್ರದ್ಧಾ-ಭಕ್ತಿಯಿಂದ ನೆರವೇರಿಸಿ, ಮಹಾ ಅನ್ನ ಸಂತರ್ಪಣೆಗೆ ಚಾಲನೆ ನೀಡಲಾಯಿತು.

ಈ ಜಾತ್ರೆಯ ವಿಶೇಷ ಏನೆಂದರೆ, ಈ ದಿನ ಊರಿನ ಯಾರ ಮನೆಯಲ್ಲೂ ಅಡುಗೆ ಮಾಡುವುದಿಲ್ಲ. ಎಲ್ಲರೂ ಅನ್ನಸಂತರ್ಪಣೆಯಲ್ಲಿ ಊಟ ಮಾಡುತ್ತಾರೆ. ಅಷ್ಟೇ ಅಲ್ಲ, ಈ ಹಬ್ಬಕ್ಕೆ ಎಲ್ಲಾ ಬಂಧು-ಮಿತ್ರನ್ನು ಮತ್ತು ಹೆಣ್ಣು ಮಕ್ಕಳು - ಅಳಿಯಂದಿರನ್ನು ಆಹ್ವಾನಿಸುವುದು ವಿಶೇಷವಾಗಿದೆ.

ದೇವಸ್ಥಾನವನ್ನು ಅಡಕೆ ಗೊನೆ, ಬಾಳೆ ಗೊನೆ, ತೆಂಗಿನಕಾಯಿ ಗೊನೆಗಳಿಂದ ಅಲಂಕಾರ ಮಾಡಲಾಗಿತ್ತು. ದಾವಣಗೆರೆ, ಶಿವಮೊಗ್ಗ, ಹಾವೇರಿ, ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಗಳ ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.

# ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯ ನಿಧಿ ದುರುಪಯೋಗ ಖಂಡಿಸಿ 28ರಂದು ಪ್ರತಿಭಟನೆ

ಬೆಂಗಳೂರು, ನ.24- ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಶೈಕ್ಷಣಿಕ ಸಹಾಯಧನ ಕಡಿತ ಹಿಂಪಡೆಯಬೇಕು ಮತ್ತು ವೈದ್ಯಕೀಯ ತಪಾಸಣೆ ನೆಪದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ವರ್ಗಾವಣೆ ಆಗುತ್ತಿರುವ ಕಲ್ಯಾಣ ಮಂಡಳಿ ನಿಧಿ ನಿಲ್ಲಿಸಲು ಒತ್ತಾಯಿಸಿ, ಇದೇ ದಿನಾಂಕ 28 ಮತ್ತು 29 ಬೆಂಗಳೂರಿನಲ್ಲಿ ಕಾರ್ಮಿಕರು ಪ್ರತಿಭಟನೆ ನಡೆಸಲಿದ್ದಾರೆ.

ಈ ಸಂಬಂಧ ಹೇಳಿಕೆ ನೀಡಿರುವ ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಗಳ ಸಮನ್ವಯ ಸಮಿತಿ, ಹಿಂದಿನ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಿದ್ದ ಕಾಂಗ್ರೆಸ್ ಪಕ್ಷವು, ಅಧಿಕಾರಕ್ಕೆ ಬಂದ ಬಳಿಕ ಹಿಂದಿನ ಸರ್ಕಾರದ ಹಾದಿಯಲ್ಲೇ ಸಾಗುತ್ತಿರುವುದು ದುರದೃಷ್ಟಕರ. ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿರುವ ನಿಧಿಯನ್ನು ಮತ್ತೆ ಖರೀದಿಗಳ ನೆಪದಲ್ಲಿ ದುರುಪಯೋಗ ಮಾಡುತ್ತಿರುವುದು ಅತ್ಯಂತ ಖಂಡನಾರ್ಹ ಎಂದು ದೂರಿದೆ.

ಕಾರ್ಮಿಕ ಸಚಿವರು ಮಂಡಳಿ ಅಧ್ಯಕ್ಷರಾದ ಬಳಿಕ ನೋಂದಾಯಿತ ಕಟ್ಟಡ ಕಾರ್ಮಿಕರ ಇಬ್ಬರು ಮಕ್ಕಳಿಗೆ ಶೈಕ್ಷಣಿಕ ಸಹಾಯಧನ ನೀಡುವ ಕಲಿಕಾ ಭಾಗ್ಯ ಯೋಜನೆಯನ್ನು ದುರ್ಬಲಗೊಳಿಸಲಾಗಿದೆ. ಶೇಕಡ 75ರಷ್ಟು ಹಣವನ್ನು ಕಡಿತ ಮಾಡಲಾಗಿದೆ. ಇದರಿಂದಾಗಿ ಸಾವಿರಾರು ಬಡ ಕಟ್ಟಡ ಕಾರ್ಮಿಕರ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗುವ ಅಪಾಯ ಬಂದಿದೆ.

ಕಾರ್ಮಿಕರ ಆರೋಗ್ಯ ತಪಾಸಣೆ ಮಾಡುವ ಯೋಜನೆಗೆ ಕಾರ್ಯಾದೇಶ ನೀಡಿದ್ದು, ಇದು ಕಾರ್ಮಿಕರಿಗೆ ಯಾವುದೇ ರೀತಿ ಪ್ರಯೋಜನವಾಗದು. ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲೂ ಈ ಯೋಜನೆ ತರಲಾಗಿತ್ತು. ಆದರೆ ಇದರಿಂದ ಕಾರ್ಮಿಕರಿಗೆ ಯಾವುದೇ ಪ್ರಯೋಜನ ಆಗಿಲ್ಲ.

ಅಲ್ಲದೆ ಇದೇ ತಪಾಸಣೆಯನ್ನು ಸರ್ಕಾರದ ಹೆಸರಾಂತ ವೈದ್ಯಕೀಯ ಸಂಸ್ಥೆಗಳಾದ ಕಿದ್ವಾಯಿ, ಜಯದೇವ, ಇಎಸ್ಐ, ಸಂಜಯಗಾಂಧಿ, ರಾಜೀವ್ ಗಾಂಧಿ, ನಿಮ್ಹಾನ್ಸ್, ವಿಕ್ಟೋರಿಯಾ, ಮಿಂಟೋ, ಕೆ.ಸಿ ಜನರಲ್, ಬೌರಿಂಗ್, ಹುಬ್ಬಳ್ಳಿ ಕೆಎಂಸಿ ಹಾಗೂ ರಾಜ್ಯಾದ್ಯಂತ ಇರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಹಯೋಗದೊಂದಿಗೆ ಅತ್ಯಂತ ಕಡಿಮೆ ಖರ್ಚಿನೊಂದಿಗೆ ನಡೆಸಬೇಕು ಎನ್ನುವ ಸಲಹೆಗಳನ್ನು ಹಲವಾರು ಬಾರಿ ಕಾರ್ಮಿಕ ಸಂಘಗಳು ನೀಡಿವೆ. ಆದರೆ ಮಂಡಳಿ ಹಾಗೂ ಕಾರ್ಮಿಕ ಇಲಾಖೆಯ ಭ್ರಷ್ಟ ಅಧಿಕಾರಿಗಳು ಕಲ್ಯಾಣ ಮಂಡಳಿ ನಿಧಿಯನ್ನು ಲೂಟಿ ಹೊಡೆಯಲು ಖಾಸಗಿ ಆಸ್ಪತ್ರೆಗಳೊಂದಿಗೆ ಕೈ ಜೋಡಿಸಿ ಬಡ ಕಟ್ಟಡ ಕಾರ್ಮಿಕರ ಬೆವರಿನಿಂದ ಸಂಗ್ರಹಿಸಲಾದ ಹಣಕ್ಕೆ ಕನ್ನ ಹಾಕಿದ್ದಾರೆ.

ಕಾಂಗ್ರೆಸ್ ಸರ್ಕಾರ ಕಾರ್ಮಿಕ ಸಂಘಗಳನ್ನು ಹೊರಗಿಟ್ಟು ಕೇವಲ ಕೆಲವು ವಂದಿಮಾಗದರನ್ನು ಕಲ್ಯಾಣ ಮಂಡಳಿಗೆ ನೇಮಿಸಿದೆ. ಕಾರ್ಮಿಕ ಸಚಿವರು ಪ್ರಜಾಸತ್ತಾತ್ಮಕ ಚರ್ಚೆಗೆ ಸಿದ್ದವಿಲ್ಲ ಎಂಬುದನ್ನು ಇದು ಸಾಬೀತು ಪಡಿಸುತ್ತದೆ. ಆದ್ದರಿಂದ ಇಂತಹ ಪ್ರಯತ್ನ ಕೈ ಬಿಟ್ಟು ಎಲ್ಲ ಕೇಂದ್ರ ಕಾರ್ಮಿಕ ಸಂಘಗಳನ್ನೊಳಗೊಂಡು ಕಲ್ಯಾಣ ಮಂಡಳಿ ಪುನರ್ ರಚಿಸಬೇಕೆಂದು ಒತ್ತಾಯಿಸಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಮನ್ವಯ ಸಮಿತಿ ತಿಳಿಸಿದೆ.

## ಜರ್ಮನ್ ಆರ್ಥಿಕ ವ್ಯವಸ್ಥೆಯಲ್ಲಿ ಕುಸಿತ

**(1ನೇ ಪುಟದಿಂದ)** ಶೇ.0.5ರಷ್ಟಿರುವ ಅಂದಾಜಿದೆ. ಪರಿಸ್ಥಿತಿ ಎದುರಿಸಲು ಈ ವರ್ಷ ತುರ್ತು ಪರಿಸ್ಥಿತಿ ಹೇರಲು ಹಣಕಾಸು ಸಚಿವರಾದ ಕ್ರಿಶ್ಚಿಯನ್ ಲಿಂಡ್ನರ್ ಪ್ರಸ್ತಾಪಿಸಿದ್ದಾರೆ. ಆದರೆ, ಹೆಚ್ಚುವರಿ ಹಣವನ್ನು ಸಾಲವಾಗಿ ಪಡೆದು ಮುಂದಿನ ವರ್ಷ ವೆಚ್ಚ ಮಾಡಲು ಕಾನೂನು ತೊಡಕು ಎದುರಾಗಿದೆ.

## ವಾಪಸ್‌ಗೆ ಸಿಎಂ ಸಮರ್ಥನೆ

**(1ನೇ ಪುಟದಿಂದ)** ದಿನಗಳ ಹಿಂದೆ ಹಿರಿಯ ವಕೀಲರ ಸಭೆ ಕರೆದು, ಈ ಕೇಸಿನಿಂದ ಯಾವ ರೀತಿ ರಕ್ಷಣೆ ಪಡೆಯಬೇಕು ಎಂದು ಚರ್ಚೆ ಮಾಡಿದ್ದಾರೆ. ನಮಗೆ ಎಲ್ಲಾ ಮಾಹಿತಿ ಇದೆ. ಮೊನ್ನೆಯೇ ಈ ವಿಚಾರ ನನ್ನ ಗಮನಕ್ಕೆ ಬಂತು. ಸಂಪುಟ ಸಭೆಯ ತೀರ್ಮಾನ, ಈ ನಡವಳಿಕೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ಆಗುತ್ತದೆ. ಈ ವಿಚಾರವನ್ನು ಮುಂದಿನ ಸದನದಲ್ಲಿ ಚರ್ಚೆ ಮಾಡೋಣ ಎಂದರು ಅವರು.

ಅಕ್ರಮ ಆಸ್ತಿ ಕೇಸನ್ನು ಸಿಬಿಐನಿಂದ ವಾಪಸ್ ಪಡೆದು, ಲೋಕಾಯುಕ್ತ ಅಥವಾ ಸ್ಥಳೀಯ ಪೊಲೀಸರಿಂದ ತನಿಖೆ ಮಾಡಲು ಆಗುತ್ತದೆಯೇ? ಲೋಕಾಯುಕ್ತ ಅಥವಾ ಪೊಲೀಸರು ಈ ತನಿಖೆ ಮಾಡಲು ಸಾಧ್ಯವೇ? ಹಿಂದಿನ ಸರ್ಕಾರವು ಸಿಬಿಐಗೆ ವಹಿಸಲು ಸ್ಪೀಕರ್ ಅನುಮತಿ ಪಡೆದಿರಲಿಲ್ಲ ಎನ್ನುವುದಾದರೆ, ಇವರು ಸ್ಪೀಕರ್ ಅವರಿಂದ ಅನುಮತಿ ಪಡೆದಿದ್ದಾರಾ? ಇದೆಲ್ಲಾ ಕೇವಲ ಸಬೂಬುಗಳು ಮಾತ್ರ ಎಂದು ಹೇಳಿದರು.

ತನಿಖೆ ಮುಂದುವರೆಸಿ ಎಂದು ಈಗಾಗಲೇ ಕೋರ್ಟ್ ಆದೇಶ ಆಗಿದೆ. ಈಗ ಸ್ಪೀಕರ್ ಅನುಮತಿ ಪಡೆದರೂ ಸಿಬಿಐನಿಂದ ಕೇಸ್ ವಾಪಸ್ ಪಡೆಯಲು ಆಗುತ್ತಾ? ಎಂದು ರಾಜ್ಯ ಸರ್ಕಾರಕ್ಕೆ ಪ್ರಶ್ನೆಗಳ ಸುರಿಮಳೆಗರೆದರು.

ಇದೇ ಸಿದ್ದರಾಮಯ್ಯ ಅವರು ಐದು ವರ್ಷ ಸಿಎಂ ಆಗಿದ್ದಾಗ, ಲೋಕಾಯುಕ್ತ ರದ್ದು ಮಾಡಿ, ಎಸಿಬಿ ರಚನೆ ಮಾಡಿ ಎಲ್ಲಾ ಅಕ್ರಮಗಳನ್ನು ಮುಚ್ಚಿ ಹಾಕಿದರು. ಇಂಥ ಕೆಲಸದಲ್ಲಿ ಸಿದ್ದರಾಮಯ್ಯ ನಿಪುಣರು.

ಈ ಬಗ್ಗೆ ಅವರಿಗೆ ಬಹಳ ಅನುಭವ ಇದೆ. ಹಾಗಾಗಿ ಕಾನೂನು ವ್ಯವಸ್ಥೆಯಲ್ಲಿ ಹೊಸ ಹೆಜ್ಜೆ ಹಾಕಲು ಹೊರಟಿದ್ದಾರೆ ಎಂದು ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡರು.

## ನಗರದಲ್ಲಿ ಇಂದು ಕನ್ನಡ ಹಬ್ಬ

ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಇಂದು ಸಂಜೆ 5.30 ಕ್ಕೆ ಶಿವಯೋಗ ಮಂದಿರದ ಆವರಣದಲ್ಲಿ ಕನ್ನಡ ಹಬ್ಬ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ವೇದಿಕೆ ಸಂಸ್ಥಾಪಕ ರಾಜ್ಯಾಧ್ಯಕ್ಷ ವಿ. ಅವಿನಾಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಸಕ ಕೆ.ಎಸ್.ಬಸವಂತಪ್ಪ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದು, ಶಾಸಕ ಬಿ.ಪಿ. ಹರೀಶ್ ಅಂಧ ಹಾಗೂ ಅನಾಥ ಮಕ್ಕಳಿಗೆ ಪಠ್ಯಪುಸ್ತಕ ವಿತರಿಸುವರು. ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪೂರ್ವ ವಲಯ ಐಜಿಪಿ ಡಾ. ಕೆ. ತ್ಯಾಗರಾಜನ್, ಅಪರ ಜಿಲ್ಲಾಧಿಕಾರಿ ಲೋಕೇಶ್, ಶಾಸಕ ದೇವೇಂದ್ರಪ್ಪ, ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ಮೇಯರ್ ವಿನಾಯಕ ಪೈಲ್ವಾನ್, ಉಪ ಮೇಯರ್ ಯಶೋಧ ಹೆಗ್ಗಪ್ಪ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

## ಪಾಲಿಕೆ: ಇಂದಿನಿಂದ ರಾಜ್ಯೋತ್ಸವ

**(1ನೇ ಪುಟದಿಂದ)** ಪ್ರತಿದಿನ ವೇದಿಕೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಒಟ್ಟು 105 ಸಾಧಕರಿಗೆ ಸನ್ಮಾನ ಮಾಡಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮೇಯರ್ ವಿನಾಯಕ್ ಪೈಲ್ವಾನ್, ಪಾಲಿಕೆ ಸದಸ್ಯರಾದ ಮಂಜುನಾಥ್ ಗಡಿಗುಡಾಳ್, ಅಬ್ದುಲ್ ಲತೀಫ್, ಜಾಕೀರ್ ಅಲಿ, ಸೋಗಿ ಶಾಂತಕುಮಾರ್, ಚಮನ್ ಸಾಬ್ ಇತರರು ಇದ್ದರು.


॥ ಶ್ರೀ ಕಣವಿ ವೀರಭದ್ರೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಜನನ : 06-10-1935 ಮರಣ : 21-11-2023

ದಾವಣಗೆರೆ ಎಂ.ಸಿ.ಸಿ.ಬ್ಲಾಕ್ 4ನೇ ಮೇನ್, 6ನೇ ಕ್ರಾಸ್, ಗುಂಡಿ ಸ್ಕೂಲ್ ಹತ್ತಿರದ ವಾಸಿಗಳಾದ ದಿ॥ ಮಹಾಲಿಂಗಪ್ಪನವರ ಮಗನಾದ

**ಶ್ರೀ ಎಂ. ರವೀಂದ್ರನಾಥ ಮತ್ತು ಸಹೋದರ**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 21-11-2023 ನೇ ಮಂಗಳವಾರ ಸಂಜೆ 6-00 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ

ನೇತ್ರದಾನಿ **ಶ್ರೀಮತಿ ಸರೋಜಮ್ಮ ಮಹಾಲಿಂಗಪ್ಪ (ಮುಂಡಾಸ್)**

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು

ದಿನಾಂಕ : **25-11-2023**ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ

**ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪ, ಅಕ್ಕಮಹಾದೇವಿ ರಸ್ತೆ, ದಾವಣಗೆರೆ ಇಲ್ಲಿ**

ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಮಂಗಳ, ಶ್ರೀ ರವೀಂದ್ರನಾಥ, ಶ್ರೀಮತಿ ಭಾಗ್ಯ, ಶ್ರೀ ಶಶಿಶೇಖರ್ ಮಗಳಾದ ಶ್ರೀಮತಿ ಗೌರಾಂಬಿಕ, ಶ್ರೀ ಸದಾಶಿವಪ್ಪ ಜಿ. ಮತ್ತು ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು, ಸೊಕ್ಕಿ ಕಶಕ್ಷರ್ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 94481 54681, 9980 711886

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



### ಪುಟಗನಾಳ್ ದೊಡ್ಡಬಸಪ್ಪ ದಾಕ್ಷಾಯಿಣಮ್ಮ ನಿಧನ



ದಾವಣಗೆರೆ ತಾಲ್ಲೂಕು ಪುಟಗನಾಳು ಗ್ರಾಮದ ವಾಸಿ ದೊಡ್ಡಬಸಪ್ಪ ನಾರಪ್ಪನವರ ಧರ್ಮಪತ್ನಿ ಶ್ರೀಮತಿ ದಾಕ್ಷಾಯಿಣಮ್ಮ ಅವರು ದಿನಾಂಕ 24.11.2023 ರ ಶುಕ್ರವಾರ ಸಂಜೆ 4.45 ಕ್ಕೆ ನಿಧನರಾಗಿದ್ದಾರೆ. ಪತಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.11.2023 ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಪುಟಗನಾಳು ಗ್ರಾಮದ ಅವರ ಜಮೀನಿನಲ್ಲಿ ನೆರವೇರಲಿದೆ.

**ರಕ್ತದಾನ ಶ್ರೇಷ್ಠದಾನ**


**ಐದನೇ ವರ್ಷದ ಪುಣ್ಯಸ್ಮರಣೆ**



**ದಿ॥ ಶರಣ ಹೆಚ್. ಈ. ಗಂಗಾಧರಯ್ಯ**

ಲಿಂಗೈಕ್ಯ : 28.11.2017

**(ಸೆಕ್ರೆಟರಿ ಆಫ್ ನವಚೇತನ ಕಿಡ್ಸ್ ಪ್ಲೇ ಹೋಂ)**

ನೀವು ನಮ್ಮನ್ನಗಲಿ ಆರು ವರ್ಷಗಳಾದವು. ನಿಮ್ಮ ಸರಳತೆ ಮತ್ತು ನೀವು ಅನುಸರಿಸಿದ ಸನ್ಮಾರ್ಗವೇ ನಮಗೆ ಪ್ರೇರಣೆ... ಸದಾ ನಿಮ್ಮ ಸ್ಮರಣೆಯಲ್ಲಿರುವ...

ಕುಟುಂಬ ವರ್ಗದವರಾದ :

ಶರಣೆ ಕೆ.ಇ. ಅಂಬುಜಾಕ್ಷಿ, ಸೆಕ್ರೆಟರಿ ಆಫ್ ನವಚೇತನ ಕಿಡ್ಸ್ ಪ್ಲೇ ಹೋಂ

ಮಕ್ಕಳಾದ : ತನುಷ್, ತನೋಜ್

ಅತ್ತೆ-ಮಾವ : ಶ್ರೀಮತಿ ಪ್ರಮೀಳ ಈಶ್ವರಪ್ಪ ಮತ್ತು ಮಕ್ಕಳು, ಕುರುಡಿ.

ಸಹೋದರರು : ರಾಜಯ್ಯ, ಬಸವಕುಮಾರಯ್ಯ, ಗೊಪ್ಪೇನಹಳ್ಳಿ., ಸಹೋದರಿಯರು : ಗಿರಿಜಮ್ಮ, ರುದ್ರಮ್ಮ

ನವಚೇತನ ಕಿಡ್ಸ್ ಪ್ಲೇ ಹೋಂ, ಶಿವಕುಮಾರ ಸ್ವಾಮಿ ಬಡಾವಣೆ, ದಾವಣಗೆರೆ. ಸಿಬ್ಬಂದಿ ವರ್ಗದವರು ಹಾಗೂ ಬಂಧು-ಮಿತ್ರರು


# ಅಪ್ರಾಪ್ತೆ ಅಪಹರಿಸಿ ಅತ್ಯಾಚಾರ : 20 ವರ್ಷ ಶಿಕ್ಷೆ

ದಾವಣಗೆರೆ, ನ.24- ಅಪ್ರಾಪ್ತ ಬಾಲಕಿಯನ್ನು ಅಪಹರಣ ಮಾಡಿ, ಅತ್ಯಾಚಾರ ಮಾಡಿದ ಆರೋಪಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು 20 ವರ್ಷ ಶಿಕ್ಷೆ ಹಾಗೂ 17 ಸಾವಿರ ರೂ. ದಂಡ ವಿಧಿಸಿದೆ. ಸಾದಿಕ್ ಅಲಿ ಎಂಬಾತ ಅಪ್ರಾಪ್ತಳಾದ ನನ್ನ ಮಗಳನ್ನು ಮದುವೆಯಾಗು ತ್ತೇನೆಂದು ಪುಸಲಾಯಿಸಿ ಬಲವಂತವಾಗಿ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿದ್ದು, ಆತನ ವಿರುದ್ಧ ಕ್ರಮ ಜರುಗಿಸಿ ನ್ಯಾಯ ದೊರಕಿಸಿಕೊಡುವಂತೆ 2020ರ ಜೂನ್ 29ರಂದು ಹರಿಹರ ತಾಲ್ಲೂಕಿನ ಮಹಿಳೆ ದೂರು ನೀಡಿದ್ದರು.

ತನಿಖಾಧಿಕಾರಿಯಾಗಿದ್ದ ಹರಿಹರ ವೃತ್ತ ನಿರೀಕ್ಷಕ ಶಿವಪ್ರಸಾದ್ ಎಂ. ಪ್ರಕರಣದ ತನಿಖೆ ಪೂರೈಸಿ ದೋಷಾರೋಪಣಾ ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್‌ಟಿಎಸ್‌ಸಿ-1, ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿದ ನ್ಯಾಯಾಧೀಶ ಎನ್. ಶ್ರೀಪಾದ ಇವರು ನ.22ರಂದು ಆರೋಪಿತನಿಗೆ ಶಿಕ್ಷೆ ವಿಧಿಸಿದ್ದು, ಸಂತ್ರಸ್ಥೆಗೆ 5 ಲಕ್ಷ ಸರ್ಕಾರದಿಂದ ಪರಿಹಾರ ನೀಡಲು ಆದೇಶ ಹೊರಡಿಸಿದ್ದಾರೆ. ಪಿರ್ಯಾದು ಪರವಾಗಿ ಸರ್ಕಾರಿ ವಕೀಲರಾದ ಸುನಂದ ಮಡಿವಾಳ ನ್ಯಾಯ ಮಂಡಿಸಿದ್ದರು.

# ವಿಶ್ವ ಕ.ರ.ವೇ. ಕಛೇರಿಯಲ್ಲಿ ಕರ್ನಾಟಕ ರಾಜ್ಯೋತ್ಸವ




ದಾವಣಗೆರೆ, ನ.24- ವಿಶ್ವ ಕ.ರ.ವೇ.ಯ ಕಛೇರಿಯಲ್ಲಿ 68 ನೇ ಕರ್ನಾಟಕ ರಾಜ್ಯೋತ್ಸವವನ್ನು ಕನ್ನಡ ಧ್ವಜಾರೋಹಣ ಮಾಡುವ ಮೂಲಕ ಆಚರಿಸಲಾಯಿತು. ಕನ್ನಡ ಧ್ವಜವನ್ನು ಹಿರಿಯ ಪತ್ರಕರ್ತ ಎಲ್. ತಾರಾನಾಥ್ ನೆರವೇರಿಸಿ ಕನ್ನಡ ನಾಡು, ನುಡಿ, ನೆಲ, ಜಲದ ಬಗ್ಗೆ ಎಲ್ಲರೂ ಕಾಳಜಿ ವಹಿಸಿ ಕನ್ನಡದ ಅಸ್ಮಿತೆಯನ್ನು ಉಳಿಸಿಕೊಳ್ಳಲು ಹೋರಾಡಲು ಕರೆ ನೀಡಿದರು .

ದಾವಣಗೆರೆ ಉದ್ಯಾನವನ ಅಭಿವೃದ್ಧಿ ಸಮಿತಿಯ ಗೌರವಾಧ್ಯಕ್ಷರು ಮಾತನಾಡಿದರು. ವಿಶ್ವ ಕ.ರ.ವೇಯ ಅಧ್ಯಕ್ಷ ಕೆ.ಜಿ.ಯಲ್ಲಪ್ಪ, ಉಪಾಧ್ಯಕ್ಷ ಮಹಬೂಬ್ ಅಮ್ಜದ್ ಅಲಿ, ಎಂ. ರವಿ, ಸಂತೋಷ್, ಬಾಬುರಾವ್, ಚಂದ್ರಶೇಖರ್, ರಂಗನಾಥ್, ಗಿರೀಶ್, ಮಹಾಲಿಂಗಪ್ಪ, ಹನುಮೇಶ್, ರವಿಕುಮಾರ್, ನಾಗಭೂಷಣ್, ನಾಡಿಗೇರ್, ವಿಶ್ವನಾಥ್, ಮಲ್ಲೇಶ್, ಲಕ್ಷ್ಮಣರಾವ್, ಫಾರೂಕ್ ಮುಂತಾದವರು ಇದ್ದರು

# ಹರಿಹರ ತಾಲ್ಲೂಕು 'ಆಮ್ ಆದ್ಮಿ' ಅಧ್ಯಕ್ಷರಾಗಿ ಬಸವರಾಜ್ ಹಲಸಬಾಳು




ಹರಿಹರ,ನ,24- 'ಆಮ್ ಆದ್ಮಿ' ಪಕ್ಷವನ್ನು ಮತ್ತಷ್ಟು ಬಲಿಷ್ಠವಾಗಿ ಕಟ್ಟುವ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ಮಾಡಿದ್ದು, ತಾಲ್ಲೂಕು ಅಧ್ಯಕ್ಷರಾಗಿ ಜಿ.ಹೆಚ್. ಬಸವರಾಜ್ ಹಲಸಬಾಳು, ನಗರ ಘಟಕದ ಅಧ್ಯಕ್ಷರಾಗಿ ಬಿ. ಮಲ್ಲೇಶ್ ಇವರನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಆಮ್ ಆದ್ಮಿ ಪಕ್ಷದ ಜಿಲ್ಲಾ ಅಧ್ಯಕ್ಷ ಕೆ.ಎಸ್. ಶಿವಕುಮಾರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕು ಉಪಾಧ್ಯಕ್ಷರಾಗಿ ಎಸ್.ಪಿ. ರೋಹಿತ್, ತಾಲ್ಲೂಕು ಪ್ರಧಾನ ಕಾರ್ಯದರ್ಶಿಯಾಗಿ ಮಹಮ್ಮದ್ ಯೂಸುಫ್, ಸಂಘಟನಾ ಕಾರ್ಯದರ್ಶಿಯಾಗಿ ನಾಗೇನಹಳ್ಳಿ ವೀರಭದ್ರಪ್ಪ, ಎಸ್ಸಿ, ಎಸ್ಟಿ, ಘಟಕದ ಅಧ್ಯಕ್ಷರಾಗಿ ಚಂದ್ರಪ್ಪ ದೇವರಬಳಕೇರೆ, ಕಾರ್ಯದರ್ಶಿಯಾಗಿ ಎ.ಕೆ. ಮಂಜಣ್ಣ ವಾಸನ, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಸೈಯದ್ ಸಾದತ್, ಕಾರ್ಯದರ್ಶಿಯಾಗಿ ಮಹಮ್ಮದ್ ಭಾಷಾ, ಪ್ರಧಾನ ಕಾರ್ಯದರ್ಶಿಯಾಗಿ ಮಹಮ್ಮದ್ ಇರ್ಫಾನ್, ದಾದಾಪೀರ್, ನಗರ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಜೀಶಾನ್ ಮಲ್ಲಿಕ್, ಮಹಿಳಾ ಘಟಕದ ಅಧ್ಯಕ್ಷರಾಗಿ ರೇಖಮ್ಮ, ಉಪಾಧ್ಯಕ್ಷರಾಗಿ ಗಂಗಮ್ಮ, ಪ್ರಧಾನ ಕಾರ್ಯದರ್ಶಿಯಾಗಿ ರಂಜಿತಾ ಮತ್ತಿತರನ್ನು ಘಟಕಕ್ಕೆ ನೂತನ ಪದಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ ಎಂದು ಹೇಳಿದರು.

ಆಮ್ ಆದ್ಮಿ ಪಕ್ಷದ ನೂತನ ತಾಲ್ಲೂಕು ಘಟಕದ ಅಧ್ಯಕ್ಷ ಜಿ.ಎಸ್. ಬಸವರಾಜ್ ಹಲಸಬಾಳು, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಗಣೇಶ ಕೆ. ದುರ್ಗದ್ ಮಾತನಾಡಿದರು.

ಈ ಸಂದರ್ಭದಲ್ಲಿ ಆಮ್ಮ ಆದ್ಮಿ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ತಾಲ್ಲೂಕು ಕಾರ್ಯದರ್ಶಿ ಮಹಮ್ಮದ್ ಯೂಸೂಫ್, ನಗರ ಘಟಕದ ಅಧ್ಯಕ್ಷ ಬಿ. ಮಲ್ಲೇಶ್, ತಾಲ್ಲೂಕು ಉಪಾಧ್ಯಕ್ಷ ಎಸ್.ಪಿ. ರೋಹಿತ್, ದಾವಣಗೆರೆ ಉತ್ತರ ಭಾಗದ ಅಧ್ಯಕ್ಷ ದೇವರಾಜ್ ಇತರರು ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ದೇವಲ ಮಹರ್ಷಿ ಜಯಂತಿ ಆಚರಣೆ



ರಾಣೇಬೆನ್ನೂರು, ನ.24- ನಗರದ ದೇವಾಂಗ ಸಮಾಜ, ನೌಕರರ ಸಂಘ, ಯುವಕ ಸಂಘ ಹಾಗೂ ಮಹಿಳಾ ಸಂಘ ಜಂಟಿಯಾಗಿ ಇಂದು ಶ್ರೀ ದೇವಾಂಗ ದೇವಲ ಮಹರ್ಷಿ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿದರು.

ಇಲ್ಲಿನ ಕುದುರಿಗಲ್ಲಿ ಶ್ರೀ ಬನಶಂಕರಿ ದೇವಸ್ಥಾನದಿಂದ ಹೊರಟ ಮಹರ್ಷಿ ಉತ್ಸವವು ಕುರುಬಗೇರಿ, ಎಂ.ಜಿ.ರಸ್ತೆ ದೊಡ್ಡ ಪೇಟೆಯಲ್ಲಿ ಹಾಯ್ದು ಕುಂಬಾರ ಓಣಿಯ ಶ್ರೀ ರಾಮಲಿಂಗ ಮಠಕ್ಕೆ ಆಗಮಿಸಿ ಅಲ್ಲಿ ನಡೆದ ಸ್ವಾಮಿಯ ವಿಶೇಷ ಪೂಜೆ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಾಯಿತು.

ಡಾ.ಬಸವರಾಜ ಕೇಲಗಾರ, ಶಾರದಾ ಆನವೇರಿ, ಬಸವರಾಜ ಲಕ್ಮೇಶ್ವರ, ಗಣೇಶ ಸಿರಗೂರ, ಸಂಕಪ್ಪ ಮಾರನಾಳ, ಕರಬಸಪ್ಪ ನೀಲಗುಂದ, ಲಕ್ಮಿಕಾಂತ ಹುಲಗೂರ, ಹನಮಂತಪ್ಪ ಹೆದ್ದೇರಿ, ಅಶೋಕ ದುರ್ಗದ ಸೀಮಿ, ಗಿರೀಶ ಗುಳೇದಗುಡ್ಡ, ಗಣೇಶ ಲಕ್ಮೇಶ್ವರ, ಬಸವರಾಜ ಮೈಲಾರ ಮತ್ತಿತರರಿದ್ದರು.

# ರವಿ ಕಾಣದ್ದನ್ನು ಕವಿ ಕಂಡ, ಕವಿ ಕಾಣದ್ದನ್ನು ಕಲಾವಿದರು ತೋರಿಸಿ

## ಕೊಂಡಜ್ಜಿಯಲ್ಲಿನ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಆಶಯ

ಹರಿಹರ,ನ. 24 - ಸಾಂಕ್ರಾಮಿಕ ಕಾಯಿಲೆಗಳ ಮತ್ತು ಅಸಾಂಕ್ರಾಮಿಕ ರೋಗಗಳ ಕುರಿತು ಆಕರ್ಷಣೀಯವಾಗಿ ಜನರ ಮನ ಮುಟ್ಟುವಂತೆ ಜಾಗೃತಿ ಮೂಡಿಸಬೇಕು. ಈ ಮೂಲಕ ರವಿ ಕಾಣದ್ದನ್ನು ಕವಿ ಕಂಡ, ಕವಿ ಕಾಣದ್ದನ್ನು ಕಲಾವಿದರು ಬೀದಿ ನಾಟಕ ಪ್ರದರ್ಶನದ ಮೂಲಕ ತೋರಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್.ಎಂ.ವಿ ತಿಳಿಸಿದರು.

ಬುಧವಾರ ಹರಿಹರ ತಾಲ್ಲೂಕು ಕೊಂಡಜ್ಜಿಯಲ್ಲಿರುವ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರದಲ್ಲಿ ನಡೆದ ಬೆಂಗಳೂರು ವಿಭಾಗ ಮಟ್ಟದ ಜಾನಪದ ಕಲಾ ತಂಡಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜನರಿಗೆ ಆರೋಗ್ಯದ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಇರುವುದರಿಂದ ತಾಯಿ ಮತ್ತು ಮಗುವಿನ ಮರಣ ಪದೇ ಪದೇ ಮರುಕಳಿಸುತ್ತಿದೆ.

ಆದ್ದರಿಂದ ತಾಯಿ ಕಾರ್ಡ್ ಬಗ್ಗೆ ಸರಿಯಾದ ಜಾಗೃತಿಯನ್ನು ಮೂಡಿಸುವುದು. ಗರ್ಭಿಣಿಯರಿಗೆ ನೀಡುವ ಲಸಿಕೆಯ ಬಗ್ಗೆ ಹಾಗೂ ತಪಾಸಣೆ, 108 ವಾಹನದ ಬಗ್ಗೆ ಆಸ್ಪತ್ರೆಯ ಹೆರಿಗೆಯ ಬಗ್ಗೆ ಜಾಗೃತಿ ಮೂಡಿಸಬೇಕು. ಇದರಿಂದ ತಾಯಿ ಮರಣ ಮತ್ತು ಮಗುವಿನ ಮರಣವನ್ನು ತಡೆಗಟ್ಟಲು ಮುಖ್ಯವಾದ ಅಸ್ತ್ರವಾಗುತ್ತದೆ ಎಂದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಷಣ್ಮುಖಪ್ಪ ಮಾತನಾಡಿ, ರಾಷ್ಟ್ರೀಯ ಕಾರ್ಯಕ್ರಮಗಳ ಅರಿವು ಜನರಿಗಿಲ್ಲದೆ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಆದ್ದರಿಂದ ಅನಿಮಿಯಾ ಮುಕ್ತ ಕರ್ನಾಟಕ, ಸುರಕ್ಷಿತ ಹೆರಿಗೆ, ಜೆ.ಎಸ್.ವೈ., ಅಂಗಾಂಗ ದಾನ, ಈ ವಿಷಯವು ಬೀದಿ ನಾಟಕದಲ್ಲಿ ಅಡಕವಾಗಿರಬೇಕು ಎಂದು ತಿಳಿಸಿದರು.

ಹರಿಹರ ತಾಲ್ಲೂಕು ನೋಡಲ್ ಅಧಿಕಾರಿ ಹಾಗೂ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಮುರುಳೀಧರ ಮಾತನಾಡಿ, ಕ್ಷಯರೋಗವು ಸಾಮಾಜಿಕ ಪಿಡುಗಾಗಿದೆ ಎಂದು ತಿಳಿಸುತ್ತಾ ಕ್ಷಯರೋಗದ ಲಕ್ಷಣ ಹಾಗೂ ನಿಯಂತ್ರಣ ಮಾಡುವ ಬಗ್ಗೆ ಪ್ರದರ್ಶನ ಮಾಡಬೇಕು ಎಂದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ. ಎನ್. ಸುರೇಶ್ ಬಾರ್ಕಿ ಮಾತನಾಡಿದರು.

ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಗಳಾದ ಡಾ. ರಾಘವನ್, ಡಾ.ರುದ್ರಸ್ವಾಮಿ, ಡಾ.ಗಂಗಾಧರ್, ಡಾ. ಮಂಜುನಾಥ್ ಪಾಟೀಲ್, ರಾಜ್ಯ ಐ.ಇ.ಸಿ. ಕೋಶದ ಆರೋಗ್ಯ ಶಿಕ್ಷಣಾಧಿಕಾರಿ ಜ್ಞಾನೇಶ್ವರ್ ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ. ಪ್ರಶಾಂತ ಕುಮಾರ್, ಪ್ರಾಥಮಿಕ ಆರೋಗ್ಯ ಕೇಂದ್ರ ಕೊಂಡಜ್ಜಿ ವೈದ್ಯಾಧಿಕಾರಿ ಡಾ.ಶಶಿಕಲಾ ಹಾಗೂ ಇತರರು ಉಪಸ್ಥಿತರಿದ್ದರು.

# ನಗರದ ಜಜಮು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಇಂದು 'ನುಡಿ ತರಂಗ'

ದಾವಣಗೆರೆ, ನ.24- ಜಗದ್ಗುರು ಜಯದೇವ ಮುರುಘರಾಜೇಂದ್ರ ವೈದ್ಯಕೀಯ ಮಹಾವಿದ್ಯಾಲಯ ದಿಂದ ಕನ್ನಡ ರಾಜ್ಯೋತ್ಸವ ನಿಮಿತ್ತ ನುಡಿ ತರಂಗ ಕಾರ್ಯಕ್ರಮವನ್ನು ನಾಳೆ ದಿನಾಂಕ 25ರಂದು ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಅಂಗರಚನಾ ಶಾಸ್ತ್ರ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲೆ ಡಾ. ಎಸ್. ಶುಕ್ಲಾ ಶೆಟ್ಟಿ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮ ದಲ್ಲಿ ವಿದ್ಯಾಲಯದ ಪ್ರಮುಖ ಪೋಷಕರಾದ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಭಾಗವಹಿಸುವರು. ಮುಖ್ಯ ಅತಿಥಿಗಳಾಗಿ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ರಹಮತ್ ತರೀಕೆರೆ ಭಾಗವಹಿಸುವರು ಎಂದರು.

ಬಾಪೂಜಿ ವಿದ್ಯಾ ಸಂಸ್ಥೆ ಸದಸ್ಯ ಡಾ. ಸಂಪನ್ನ ಮುತಾಲಿಕ್, ವಿದ್ಯಾ ಸಂಸ್ಥೆ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಅತಿಥಿಗಳಾಗಿ ಪಾಲ್ಗೊಳ್ಳುವರು. ಅದೇ ರೀತಿ ವಿಶೇಷ ಆಹ್ವಾನಿತರಾಗಿ ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಡಾ. ಎಂ.ಜಿ. ರಾಜಶೇಖರಪ್ಪ, ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ನಿರ್ದೇಶಕ ಡಾ. ಮಂಜುನಾಥ್ ಆಲೂರ್, ಆಡಳಿತ ವಿಭಾಗದ ನಿರ್ದೇಶಕ ಸತ್ಯನಾರಾಯಣ ಟಿ. ಭಾಗವಹಿಸುವರು ಎಂದು ತಿಳಿಸಿದರು. ಮಹಾವಿದ್ಯಾಲಯದ ಪ್ರಮುಖರಾದ ಅನುರೂಪ, ಗೋಪಾಲಕೃಷ್ಣ ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರದಲ್ಲಿ ಇಂದು ಸಂತ ಕನಕದಾಸರ ಕುರಿತು ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆ

ಸಂತ ಕನಕದಾಸರ ಜಯಂತಿ ಕಾರ್ಯಕ್ರಮದ ಅಂಗವಾಗಿ ಇಂದು ಬೆಳಿಗ್ಗೆ 9 ರಿಂದ 12 ರವರೆಗೆ ಶ್ರೀ ಬೀರಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಸಂತ ಕನಕದಾಸರ ಕುರಿತು ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ದಾವಣಗೆರೆ ದಕ್ಷಿಣ ಮತ್ತು ಉತ್ತರ ತಾಲ್ಲೂಕಿನ ಪ್ರೌಢ ಶಾಲೆಗಳಿಂದ ತಲಾ 4 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್ ತಿಳಿಸಿದ್ದಾರೆ.




## ಸಂಕ್ಷಿಪ್ತ ಸುದ್ದಿ

**ಆಂಧ್ರಪ್ರದೇಶದಲ್ಲಿ ಜಾತಿ ಗಣತಿಗೆ ನಿರ್ಧಾರ**

ಅಮರಾವತಿ : ಬರುವ ಡಿಸೆಂಬರ್ 9ರಿಂದ ಎಲ್ಲಾ ಜಾತಿಗಳ ಗಣತಿ ನಡೆಸಲಾಗುವುದು ಎಂದು ಆಂಧ್ರ ಪ್ರದೇಶದ ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ ಸಚಿವ ಸಿ. ಶ್ರೀನಿವಾಸ ವೇಣುಗೋಪಾಲ ಕೃಷ್ಣ ತಿಳಿಸಿದ್ದಾರೆ.

**ಹಿಂದೂಯಿಸಂ ಬಿಟ್ಟು ಹಿಂದುತ್ವ ಬಳಸಲು ಕರೆ**

ಬ್ಯಾಂಕಾಕ್ : ಹಿಂದೂಯಿಸಂ ಎಂಬ ಪದವನ್ನು ಕೈ ಬಿಟ್ಟು ಹಿಂದುತ್ವ ಹಾಗೂ ಹಿಂದೂ ಧರ್ಮ ಎಂಬಗಳನ್ನು ಬಳಸಬೇಕು. ಹಿಂದುತ್ವ ಹಾಗೂ ಹಿಂದೂ ಧರ್ಮ ಪದಗಳು ಸನಾತನ ಧರ್ಮವನ್ನು ಪ್ರತಿಬಿಂಬಿಸುತ್ತವೆ ಎಂದು ವಿಶ್ವ ಹಿಂದೂ ಕಾಂಗ್ರೆಸ್ ಸಮಾವೇಶದಲ್ಲಿ ತಿಳಿಸಲಾಗಿದೆ.

**ಭಾರತ – ನೇಪಾಳ ಸೈನ್ಯಗಳ ಜಂಟಿ ಕಸರತ್ತು ಆರಂಭ**

ನವದೆಹಲಿ : ಭಾರತ ಹಾಗೂ ನೇಪಾಳ ಸೈನಿಕ ಪಡೆಗಳ ನಡುವೆ ಉತ್ತರಾಖಂಡದ ಪಿತೋರ್‌ಘರ್‌ನಲ್ಲಿ ಜಂಟಿ ಸೈನಿಕ ಕಸರತ್ತು ಶುಕ್ರವಾರದಿಂದ ಆರಂಭವಾಗಿದೆ. 17ನೇ ವಾರ್ಷಿಕ ಕಸರತ್ತು ಡಿಸೆಂಬರ್ 7, 2023ರವರೆಗೆ ಮುಂದುವರೆಯಲಿದೆ ಎಂದು ರಕ್ಷಣಾ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಅರಣ್ಯ ಪ್ರದೇಶದಲ್ಲಿ ಕಾರ್ಯಾಚರಣೆ, ಬೆಟ್ಟಗಳ ಪ್ರದೇಶದಲ್ಲಿ ಉಗ್ರರ ವಿರುದ್ಧ ಹೋರಾಟ ಹಾಗೂ ವಿಕೋಪ ಸಂದರ್ಭಗಳಲ್ಲಿ ಮಾನವೀಯ ನೆರವಿನ ಉದ್ದೇಶದಿಂದ ಎರಡು ವಾರಗಳ ಕಸರತ್ತು ನಡೆಸಲಾಗುತ್ತಿದೆ.

**ಇಸ್ರೇಲ್ - ಹಮಾಸ್ ನಡುವಿನ ಕದನ ವಿರಾಮ ಆರಂಭ**

ಡೇರ್ ಅಲ್ - ಬಲಾ (ಗಾಜಾ ಪಟ್ಟಿ) : ಇಸ್ರೇಲ್ ಹಾಗೂ ಹಮಾಸ್ ನಡುವಿನ ನಾಲ್ಕು ದಿನಗಳ ಕದನ ವಿರಾಮ ಶುಕ್ರವಾರದಿಂದ ಆರಂಭವಾಗಿದೆ. ಗಾಜಾ ಪ್ರದೇಶದಲ್ಲಿ ನೆರವು ತಲುಪಿಸಲು ಹಾಗೂ ಉಗ್ರರು ಅಪಹರಿಸಿರುವ ಒತ್ತೆಯಾಳುಗಳ ಬಿಡುಗಡೆ ಮತ್ತು ಇಸ್ರೇಲ್‌ನಿಂದ ಪ್ಯಾಲೆಸ್ತೇನಿ ಬಂಧಿತರ ಬಿಡುಗಡೆಗೆ ಕದನ ವಿರಾಮ ಘೋಷಿಸಲಾಗಿದೆ. ಕದನ ವಿರಾಮ ಗಾಜಾದ 23 ಲಕ್ಷ ಜನರಿಗೆ ಸ್ವಲ್ಪ ಸಮಾಧಾನ ತರಲಿದೆ. ಇಸ್ರೇಲ್‌ನಿಂದ ಅಪಹೃತರಾದವರ ಬಿಡುಗಡೆಯ ನಿರೀಕ್ಷೆಗೂ ತೆರೆ ಬೀಳಲಿದೆ.

**ಪೇಟಿಎಂ ಪಾಲುಗಾರಿಕೆ ಮಾರಿದ ಬರ್ಕ್‌ಶೈರ್ ಹಾಥ್‌ವೇ**

ನವದೆಹಲಿ : ಹೂಡಿಕೆದಾರ ವಾರನ್ ಬಫೆಟ್ ಬೆಂಬಲಿತ ಬರ್ಕ್‌ಶೈರ್ ಹಾಥ್‌ವೇ ಸಂಸ್ಥೆಯು, ಪೇಟಿಎಂನಲ್ಲಿರುವ ತನ್ನ ಎಲ್ಲಾ ಶೇ.2.46ರ ಪಾಲುಗಾರಿಕೆಯನ್ನು ಮಾರಾಟ ಮಾಡಿದೆ. ಈ ಪಾಲುಗಾರಿಕೆಯನ್ನು 1,371 ಕೋಟಿ ರೂ.ಗಳಿಗೆ ಮುಕ್ತ ಮಾರುಕಟ್ಟೆ ಕಾರ್ಯಾಚರಣೆ ಮೂಲಕ ಮಾರಲಾಗಿದೆ. ಎನ್.ಎಸ್.ಇ.ನಲ್ಲಿ 1.56 ಕೋಟಿ ಷೇರುಗಳನ್ನು ಮಾರಾಟ ಮಾಡಲಾಗಿದೆ.

**ಚೀನಾದ ನ್ಯುಮೋನಿಯಾ ಅಸಹಜವಲ್ಲ, ಹೊಸ ಸೋಂಕಲ್ಲ**

ಬೀಜಿಂಗ್ : ಇತ್ತೀಚೆಗೆ ಕಂಡು ಬಂದಿರುವ ನ್ಯೂಮೋನಿಯಾದಲ್ಲಿ ಯಾವುದೇ ಅಸಹಜ ಬೆಳವಣಿಗೆಯಾಗಿಲ್ಲ. ಯಾವುದೇ ಹೊಸ ಸೋಂಕೂ ಕಂಡು ಬಂದಿಲ್ಲ ಎಂದು ವಿಶ್ವ ಆರೋಗ್ಯ ಸಂಘಟನೆಗೆ ಚೀನಾ ತಿಳಿಸಿದೆ. ಚೀನಾದಲ್ಲಿ ಇತ್ತೀಚೆಗೆ ಮಕ್ಕಳಲ್ಲಿ ಉಸಿರಾಟದ ಸಮಸ್ಯೆ ಹಾಗೂ ನ್ಯುಮೋನಿಯಾ ಹೆಚ್ಚಾಗಿತ್ತು. ಈ ಬಗ್ಗೆ ವಿವರ ನೀಡುವಂತೆ ವಿಶ್ವ ಆರೋಗ್ಯ ಸಂಘಟನೆ ತಿಳಿಸಿತ್ತು. ಚೀನಾದ ವರದಿಯನ್ನು ಪರಿಶೀಲಿಸಿರುವ ವಿಶ್ವ ಆರೋಗ್ಯ ಸಂಘಟನೆ, ಚೀನಾಗೆ ತೆರಳುವವರಿಗೆ ಯಾವುದೇ ನಿರ್ದಿಷ್ಟ ಸಲಹೆಗಳನ್ನು ನೀಡುವುದಿಲ್ಲ ಎಂದು ತಿಳಿಸಿದೆ.

**ಸಿಟಿ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗಳಿಗೆ ದಂಡ**

ಮುಂಬೈ : ಸಿಟಿ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ ಹಾಗೂ ಇಂಡಿಯನ್ ಓವರ್‌ಸೀಸ್ ಬ್ಯಾಂಕುಗಳು ಕೆಲ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕೆ ರಿಸರ್ವ್ ಬ್ಯಾಂಕ್ ಒಟ್ಟು 10.34 ಕೋಟಿ ರೂ.ಗಳ ದಂಡ ವಿಧಿಸಿದೆ. ಸಿಟಿ ಬ್ಯಾಂಕ್‌ಗೆ 5 ಕೋಟಿ ರೂ., ಬ್ಯಾಂಕ್ ಆಫ್ ಬರೋಡಾಗೆ 4.34 ಕೋಟಿ ರೂ. ಹಾಗೂ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ಗೆ 1 ಕೋಟಿ ರೂ.ಗಳ ದಂಡ ವಿಧಿಸಲಾಗಿದೆ

## ಪ್ರೀತಿಯ ಕೊರತೆಯಿಂದ ಹಳಸುತ್ತಿರುವ ಸಂಬಂಧಗಳು

**(1ನೇ ಪುಟದಿಂದ)** ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಮಾತನಾಡಿ, ಇಂದು ಜನ ಆಡಂಬರದ ವಿವಾಹಗಳಿಗೆ ಹೆಚ್ಚು ಮೊರೆ ಹೋಗಿ ಅನಾವಶ್ಯಕ ಹಣ ವ್ಯಯಿಸುತ್ತಾರೆ. ಅದಕ್ಕೆ ಕಡಿವಾಣ ಹಾಕಿ ಸಾಮೂಹಿಕ ವಿವಾಹಗಳಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

ಪ್ರತಿಷ್ಠೆ ಬಿಟ್ಟು, ದುಂದುವೆಚ್ಚಕ್ಕೆ ಕಡಿವಾಣ ಹಾಕಿ ಸಾಮೂಹಿಕ ವಿವಾಹಗಳು ಹೆಚ್ಚು ಹೆಚ್ಚಾಗಿ ಹಮ್ಮಿಕೊಳ್ಳುವ ಅಗತ್ಯವಿದೆ ಎಂದರು.

ಇದೇ ವೇಳೆ ಐದು ನವ ಜೋಡಿಗಳು ದಾಂಪತ್ಯಕ್ಕೆ ಕಾಲಿರಿಸಿದವು. ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ ವಿ. ಮಠದ್, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬೇಬಿ ಸುನೀತಾ, ಉಪ ಮಹಾಪೌರರಾದ ಯಶೋಧ ಹೆಗ್ಗಪ್ಪ, ಆರೈಕೆ ಆಸ್ಪತ್ರೆ ಮಾಲೀಕ ಡಾ. ಟಿ.ಜಿ. ರವಿಕುಮಾರ್, ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಸಮಗ್ರ ಕರ್ನಾಟಕ ರಕ್ಷಣಾ ವೇದಿಕೆ ಮಹಿಳಾ ಘಟಕದ ಅಧ್ಯಕ್ಷೆ ಮಾಲಾ ನಾಗರಾಜ್, ಸಂಸ್ಥಾಪಕ ರಾಜ್ಯಾಧ್ಯಕ್ಷ ವಿ. ಅವಿನಾಶ್, ಹನುಮಂತಪ್ಪ, ಡಿ.ಜೆ.ಭೀಮಪ್ಪ ಪೂಜಾರಿ, ಕೊಡಗನೂರು ಗೋವಿಂದರಾಜು, ಪ್ರಸನ್ನಕುಮಾರ್ ಮತ್ತಿತರರಿದ್ದರು.

# ಸಂವಿಧಾನ ಜನ ಸಂಕಲ್ಪದ ಅಭಿವ್ಯಕ್ತಿಯ ದಾಖಲೆ

ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಾರ್ವಭೌಮತ್ವದ ಅಧಿಕಾರ ದೇಶದ ಸಮಸ್ತ ಜನತೆಯದೇ ಆಗಿರುತ್ತದೆ. ಭಾರತದ ಸಂವಿಧಾನ ಮತ್ತು ಅದರ ವಿಧಿನಿಯಮಗಳು ದೇಶದ ಜನತೆಯು,ದೇಶದ ಜನತೆಗೆ ಅರ್ಪಿಸಿಕೊಂಡದ್ದು,We the people of India ಎಂದು ಆರಂಭವಾಗುವ ಸಂವಿಧಾನವು ಜನರ ಸಂಕಲ್ಪದ ಅಭಿವ್ಯಕ್ತಿಯ ದಾಖಲೆಯಾಗಿದೆ.

ಸಂವಿಧಾನ - ಕೇವಲ ಹಿಂದೂಗಳದಲ್ಲ, ಮುಸಲ್ಮಾನರದ್ದಲ್ಲ, ಕ್ರೈಸ್ತ, ಜೈನರದ್ದಲ್ಲ ಅಥವಾ ಬೇರಾ ವುದೋ ಮತಧರ್ಮದವರದ್ದೋ ಜಾತಿಯವರದ್ದೋ ಅಲ್ಲ.

ಭಾರತದ ಸಂವಿಧಾನ ಎಲ್ಲರದ್ದು. ಸಂವಿಧಾನಕ್ಕೆ ಈ ದೇಶದ ಜನತೆಯಾದ ನಮ್ಮ ನಿಷ್ಠೆ ಪ್ರಥಮ ಮತ್ತು ಪರಮ ಆದ್ಯತೆಯಾಗಬೇಕು. ವರ್ತಮಾನ ಭಾರತದಲ್ಲಿ, ದ್ವೇಷದಿಂದ ದೇಶ ಕಟ್ಟಲು ಸಾಧ್ಯವಿಲ್ಲ. ದ್ವೇಷ , ಬಿಟ್ಟು, ದೇಶ ಕಟ್ಟು, ಎಂಬುದು ನಮ್ಮ ಮನದ ಮಾತಾಗಬೇಕಿದೆ.

ಭಾರತದ ಸಂವಿಧಾನಕ್ಕೆ ಅಂತಿಮ ಸ್ಪರ್ಶ ನೀಡಿದ ನವೆಂಬರ್ 25ನೇ ತಾರೀಖು, ಭಾರತದ ಮಟ್ಟಿಗೆ ಬಹು ಅಮೂಲ್ಯವಾದ ದಿನ. ಈ ಹಿನ್ನೆಲೆಯಲ್ಲಿ ದಿನಾಂಕ 25.11.2023ರ ಶನಿವಾರ ಬೆಳಿಗ್ಗೆ 9.30 ಕ್ಕೆ ದಾವಣಗೆರೆ ನಗರದ ಬಿ.ಐ.ಇ.ಟಿ. ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಸಭಾಂಗಣದಲ್ಲಿ ಪ್ರೌಢಶಾಲಾ ಮಕ್ಕಳತ್ತ ಸಂವಿಧಾನ ಅರಿವಿನ ಯಾನ ಕಾರ್ಯಕ್ರಮ ನಡೆಯಲಿದೆ. ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘದ ಹಾಗೂ ಈಗಾಗಲೇ ನಾಡಿಗೆ ವೈಚಾರಿಕ ಬೆಳಕನ್ನು ಪಸರಿಸುವ ಮೂಲಕ ಹೆಸರಾದ ಮೇ ಸಾಹಿತ್ಯ ಬಳಗ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ,

**ನಗರದಲ್ಲಿ ಇಂದು ಪ್ರೌಢಶಾಲಾ ಮಕ್ಕಳತ್ತ ಸಂವಿಧಾನ ಅರಿವಿನ ಯಾನ ಕಾರ್ಯಕ್ರಮ**

ಸಂವಿಧಾನಕ್ಕಾಗಿ ನಾವು ಸಂಘಟನೆಗಳು ಸೇರಿ ಈ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ.

ಗೌರವಾನ್ವಿತ ಉಚ್ಚನ್ಯಾಯಾಲಯದ ನ್ಯಾಯ ಮೂರ್ತಿ ಹೆಚ್.ಪಿ. ಸಂದೇಶ್ ಕಾರ್ಯಕ್ರಮಕ್ಕೆ ಆಗಮಿಸಲಿದ್ದು, ಕಾರ್ಯಕ್ರಮದಲ್ಲಿ ಸಂವಿಧಾನ ಕುರಿತು ವಿಶೇಷ ಉಪನ್ಯಾಸ ನೀಡುವುದಲ್ಲದೆ, ಹಾಜರಿರುವ ಸಾವಿರಕ್ಕೂ ಹೆಚ್ಚು ಮಕ್ಕಳೊಂದಿಗೆ ಸಂವಾದಿಸುವರು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅವರು ಅಧ್ಯಕ್ಷತೆ ವಹಿಸುವರು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ.ಕೊಟ್ರೇಶ, ಜಿಲ್ಲಾ ಕಾ.ಸೇ. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣಕುಮಾರ್, ಹಿರಿಯ ಚಿಂತಕ ಬಿ.ಎಮ್.ಹನುಮಂತಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ.ಫಕ್ರುದ್ದೀನ್ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ನಮ್ಮ ಪ್ರಜಾಪ್ರಭುತ್ವವು ಅಹಿಂಸಾ ಪಥ ಭ್ರಷ್ಟ ಆಗದಂತೆ ಕಾಯುವುದಕ್ಕೆ, ಕಾಪಾಡಿಕೊಳ್ಳುವುದಕ್ಕೆ, ನಾಡಿನೆಲ್ಲೆಡೆ ಇಂತಹ ಕಾರ್ಯಕ್ರಮಗಳ ಮೂಲಕ ಬೆಳಕನ್ನು ಪಸರಿಸುವ ಕೆಲಸ ಮಾಡುತ್ತಿರುವ ಲಡಾಯಿ ಪ್ರಕಾಶನದ ಬಸೂ, ಮೇ ಸಾಹಿತ್ಯ ಮೇಳ ರೂವಾರಿಗಳು, ನಾಡಿನ ಚಿಂತಕರಾದ ಬಸವರಾಜ ಸೂಳಿಬಾವಿಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ.

ದೇಶದಲ್ಲಿ ಇರುವ ಎಲ್ಲರೂ ಪರಸ್ಪರ ಪ್ರೀತಿ, ಸೌಹಾರ್ದ, ಸಮಭಾವದಲ್ಲಿ ಸ್ವತಂತ್ರವಾಗಿ ಬಾಳುವುದು ಎಲ್ಲರೂ ಕ್ಷೇಮಕ್ಕಾಗಿ ಬಾಳುವುದು, ದುಡಿಯುವುದು, ಹಾರೈಸುವುದು ಮುಖ್ಯ. ಇಂತಹ ವಿಷಯಗಳನ್ನು ಅತ್ಯಂತ ಸರಳವಾಗಿ, ಮಕ್ಕಳಿಗೆ ಅರ್ಥವಾಗುವ ಹಾಗೆ ಮಹಿಳಾ ಒಕ್ಕೂಟದ ಸದಸ್ಯೆ, ಕಲಾವಿದೆ, ನಟಿ, ಲೇಖಕಿ ಬಹುಮುಖ ಪ್ರತಿಭೆ ವಾಣಿ ಪೆರಿಯೋಡಿ ಬರೆದ 'ಮಕ್ಕಳಿಗಾಗಿ ಸಂವಿಧಾನ' ಕೃತಿಯನ್ನು ಅಂದು ಹಾಜರಿರುವ ಎಲ್ಲಾ ಮಕ್ಕಳಿಗೂ (1200 ರಿಂದ 1300) ಉಚಿತವಾಗಿ ಹಂಚಲು ನಾಡಿನ ಹಲವಾರು ಮನಸ್ಸುಗಳು ಮುಂದೆ ಬಂದಿವೆ.

ನಮ್ಮ ದೇಶದ ಸಂವಿಧಾನವೇ ನಮ್ಮ ಧರ್ಮ, ನಮ್ಮ ಆದರ್ಶ, ನಮ್ಮ ಮಾರ್ಗದರ್ಶಕ, ಅದೇ ನಮಗೆ ಪ್ರಥಮ ಅದೇ ನಮಗೆ ಪ್ರಧಾನ ಎಂದು ಭಾವಿಸಿರುವ ನ್ಯಾಯಾಂಗ, ಕಾರ್ಯಾಂಗ ಮತ್ತು ಮಾಧ್ಯಮ ರಂಗಗಳು ಸೇರಿ ಆಯೋಜಿಸಿರುವ ಈ ಕಾರ್ಯಕ್ರಮವು ಕರ್ನಾಟಕದಲ್ಲಿ ಈಗಾಗಲೇ ಐತಿಹಾಸಿಕ ಆರಂಭವನ್ನು ದಾವಣಗೆರೆ ಯಿಂದಲೇ ಪಡೆದುಕೊಂಡಿದೆ. ಕರ್ನಾಟಕದ ಇತರ ಭಾಗಗಳಲ್ಲಿಯೂ ಜನರಿಂದ ಜನರಿಗಾಗಿಯೇ ಇಂತಹ ಕಾರ್ಯಕ್ರಮಗಳನ್ನು ನಡೆಸಲು ಮುಂದೆ ಬರುತ್ತಿರುವುದು, ಭಾರತದ ಸಂವಿಧಾನ ನಮ್ಮೆಲ್ಲರ ಬಾಳ್ವೆಗೆ ಅಗತ್ಯವಾದ ಮನೋಧರ್ಮವನ್ನು ರೂಪಿಸುವ ಜೀವತತ್ವವಾಗಿದೆ ಎಂಬುದನ್ನು ಮತ್ತೆ ಮತ್ತೆ ನೆನಪಿಸುವ ವಿಶೇಷ ಕಾರ್ಯಕ್ರಮವಾಗಿದೆ.

**- ಬಿ. ಶ್ರೀನಿವಾಸ್,**
**ಜಿಲ್ಲಾ ನ್ಯಾಯಾಲಯ, ದಾವಣಗೆರೆ.**

## ಕೊಮಾರನಹಳ್ಳಿ : ಅಮ್ಮನವರ ದೇವಸ್ಥಾನ ನಿರ್ಮಾಣಕ್ಕೆ ಚಾಲನೆ



ಮಲೇಬೆನ್ನೂರು, ನ.24- ಕೊಮಾರನಹಳ್ಳಿ ಗ್ರಾಮದಲ್ಲಿ ಗ್ರಾಮದೇವತೆ ಅಮ್ಮನವರ ನೂತನ ದೇವಸ್ಥಾನ ನಿರ್ಮಾಣಕ್ಕೆ ಶುಕ್ರವಾರ ಬೆಳಿಗ್ಗೆ ಗ್ರಾಮಸ್ಥರು ಶಂಕುಸ್ಥಾಪನೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಗ್ರಾಮದ ಮುಖಂಡರಾದ ಐರಣಿ ಭರಮಪ್ಪ, ಅರಕೆರೆ ಹಾಲೇಶಪ್ಪ, ಐರಣಿ ಪುಟ್ಟಪ್ಪ, ಪೂಜಾರ್ ಕೆಂಚಪ್ಪ, ಜಿ.ಮಂಜುನಾಥ್ ಪಟೇಲ್, ಮಡಿವಾಳರ ಹಲಗಪ್ಪ, ಜಿ.ರಂಗನಾಥ್, ಗುಡಿಯಪ್ಪರ ರಂಗಪ್ಪ, ಐರಣಿ ರೇವಣಸಿದ್ದಪ್ಪ, ಕೆ.ಎಂ.ನಾಗರಾಜಯ್ಯ, ಆಂಜನೇಯ ಗುರುನಾಥಚಾರ್, ಗ್ರಾ.ಪಂ. ಸದಸ್ಯರಾದ ಮಡಿವಾಳರ ಬಸವರಾಜ್, ಶ್ರೀಮತಿ ರೂಪಾ ಗದಿಗೇಶ್, ಕೆ.ರಂಗಪ್ಪ, ಹುಗ್ಗಿ ರಂಗಪ್ಪ, ಕೆ. ರಾಮಚಂದ್ರಚಾರ್, ಮಲ್ಲಣ್ಣರ ಮಂಜಪ್ಪ, ಎಂ.ವೀರಬಸಪ್ಪ, ನವೀನ್ ಪಟೇಲ್, ಬಿ. ಭರಮಪ್ಪ, ಅರಕೆರೆ ನಾಗರಾಜ್, ಐರಣಿ ಮೂರ್ತಿ, ಶ್ರೀಮತಿ ಮಲ್ಲಮ್ಮ ಪಾರ್‍ಯಾರ ಹನುಮಂತಪ್ಪ, ಶ್ರೀಮತಿ ಅಕ್ಕಮ್ಮ ಚಂದ್ರಪ್ಪ ಪೂಜಾರ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ಹಿಂಡನ್‌ಬರ್ಗ್‌ನಲ್ಲಿ ಪ್ರಕಟವಾಗಿರುವುದೆಲ್ಲಾ ಸತ್ಯವಲ್ಲ : ಸುಪ್ರೀಂ

ನವದೆಹಲಿ, ನ. 24 – ಹಿಂಡನ್‌ಬರ್ಗ್ ವರದಿಯಲ್ಲಿ ತಿಳಿಸಿರುವುದು ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದೆಲ್ಲಾ ಸತ್ಯ ಎಂದು ಭಾವಿಸಲಾಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಅದಾನಿ ಸಮೂಹದ ಕುರಿತು ತನಿಖೆ ನಡೆಸಿರುವ ಸೆಬಿಗೆ ಕಳಂಕ ತರಲಾಗದು ಎಂದು ಹೇಳಿದೆ.

ಅದಾನಿ ಷೇರುಗಳನ್ನು ತಿರುಚಲಾಗಿದೆ ಎಂಬ ಆರೋಪಗಳ ಬಗ್ಗೆ ವಿಚಾರಣೆ ನಡೆಸುವಾಗ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ.

ಅದಾನಿ ಸಮೂಹದ ಕುರಿತು ಹಿಂಡನ್‌ಬರ್ಗ್ ವರದಿ ಪ್ರಕಟವಾದ ನಂತರ ಅದಾನಿ ಸಮೂಹದ ಷೇರುಗಳ ಮೌಲ್ಯದಲ್ಲಿ ತೀವ್ರ ಕುಸಿತವಾಗಿತ್ತು. ಈ ಬಗ್ಗೆ ತನಿಖೆ ನಡೆಸಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ತನಿಖೆ ನಡೆಸಲು ಮಾರುಕಟ್ಟೆ ನಿಯಂತ್ರಕ ಸೆಬಿಗೆ ಸುಪ್ರೀಂ ಕೋರ್ಟ್ ತಿಳಿಸಿತ್ತು.

ಈ ಬಗ್ಗೆ ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿ, ಸೆಬಿ ಬಳಿ 2014ರಿಂದಲೂ ಮಾಹಿತಿಗಳು ಲಭ್ಯವಿದ್ದವು. ಹೀಗಾಗಿ ಈ ವಿಷಯದಲ್ಲಿ ಸೆಬಿ ಪಾತ್ರ ಶಂಕಾಸ್ಪದವಾಗಿದೆ ಎಂದಿದ್ದರು.

ಈ ವಾದವನ್ನು ತಳ್ಳಿ ಹಾಕಿದ ಸುಪ್ರೀಂ ಕೋರ್ಟ್, ಹಿಂಡನ್‌ಬರ್ಗ್ ವರದಿಯಲ್ಲಿ ಪ್ರಕಟವಾದ ವಿಷಯವೆಲ್ಲಾ ಸತ್ಯವಾಗಿ ಬಿಡುವುದಿಲ್ಲ. ಹೀಗಾಗಿಯೇ ಸೆಬಿ ತನಿಖೆ ನಡೆಸಲು ನಾವು ನಿರ್ದೇಶನ ನೀಡಿದ್ದೇವೆ ಎಂದು ತಿಳಿಸಿತು. ಸೆಬಿ ತನಿಖೆ ನಂಬಿಕಾರ್ಹವಲ್ಲ ಎಂದು ಕೆಲ ಮಾಧ್ಯಮಗಳಲ್ಲಿ ವರದಿಯಾಗಿದೆ ಎಂದು ಭೂಷಣ್ ಹೇಳಿದರು.

ಗಾರ್ಡಿಯನ್ ಆಗಲೀ ಅಥವಾ ಫೈನಾನ್ಷಿಯಲ್ ಟೈಮ್ಸ್ ಆಗಲಿ ಯಾವುದೇ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಪರಮ ಸತ್ಯ ಎಂದು ಭಾವಿಸುವಂತೆ ನಮ್ಮ ಬಳಿ ಕೇಳಲಾಗದು. ಸುಪ್ರೀಂ ಕೋರ್ಟ್ ಸಾಕ್ಷ್ಯಾಧಾರಗಳನ್ನು ಆಧರಿಸಿ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕ ವಲಯದಲ್ಲಿ ಕೆಲವರು ಪ್ರಕಟಿಸುವ ಪ್ರಕಟಣೆಗಳು ಶಾಸನಾತ್ಮಕವಾಗಿ ಬದ್ಧತೆ ಹೊಂದಿರುವ ಸಾಕ್ಷಿಗಳ ಮಾನದಂಡಕ್ಕೆ ಒಳಪಡಬೇಕಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತು.

ಯಾವುದೇ ವಿಷಯ ನಂಬಿಕಾರ್ಹ ಎಂದು ಪರಿಗಣಿಸಬೇಕಾದರೆ ನಮ್ಮ ತನಿಖಾ ಸಂಸ್ಥೆಗಳನ್ನು ಅವಲಂಬಿಸಬೇಕಾಗುತ್ತದೆ. ಸಂಸ್ಥೆಗಳು ತನಿಖೆ ನಡೆಸಬೇಕಾಗುತ್ತದೆ. ಯಾವುದೇ ವಿಷಯ ನಂಬಿಕಾರ್ಹ ಅಥವಾ ನಂಬಿಕಾರ್ಹವಲ್ಲ ಎಂದು ನಾವು ಊಹಿಸಲಾಗದು ಎಂದೂ ನ್ಯಾಯಾಲಯ ತಿಳಿಸಿತು.

ಮುಂದುವರೆದು ಮಾತನಾಡಿದ ಭೂಷಣ್, ಸುಪ್ರೀಂ ಕೋರ್ಟ್ ಈ ವಿಷಯಕ್ಕೆ ಸಂಬಂಧಿಸಿದಂತೆ ನೇಮಿಸಿದ್ದ ಪರಿಣಿತರ ಸಮಿತಿಯ ಇಬ್ಬರು ಗಂಭೀರ ಹಿತಗಳ ಸಂಘರ್ಷ ಹೊಂದಿದ್ದಾರೆ ಎಂದು ಆರೋಪಿಸಿದರು. ಆರೋಪ ಮಾಡುವುದು ಸುಲಭ. ಆದರೆ, ಆರೋಪ ಮಾಡುವಾಗಲೂ ಕೆಲ ಹೊಣೆಗಾರಿಕೆ ಇರಬೇಕಾಗುತ್ತದೆ. ನಾವು ಯಾರಿಗೋ ನಡತೆ ಪ್ರಮಾಣಪತ್ರ ಕೊಡಲು ಕುಳಿತಿಲ್ಲ. ಆದರೆ, ನ್ಯಾಯಪರತೆಯ ಮೂಲಭೂತ ತತ್ವಗಳ ಬಗ್ಗೆ ನಮಗೆ ತಿಳುವಳಿಕೆ ಇದೆ ಎಂದು ಪೀಠ ತಿಳಿಸಿತು.

ಸೆಬಿ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ ಮಾತನಾಡಿ, ದೇಶದ ಹೊರಗೆ ಕಥೆಗಳನ್ನು ಬಿತ್ತುವ ಮೂಲಕ ಭಾರತದ ಒಳಗಿನ ನೀತಿಗಳ ಮೇಲೆ ಪ್ರಭಾವ ಬೀರುವ ಪ್ರಯತ್ನ ಹೆಚ್ಚಾಗುತ್ತಿದೆ ಎಂದರು. ಅದಾನಿ ಸಮೂಹದ ವಿರುದ್ಧದ 24 ಆರೋಪಗಳ ಪೈಕಿ 22ರ ತನಿಖೆ ಪೂರ್ಣಗೊಂಡಿದೆ ಎಂದೂ ಅವರು ಹೇಳಿದರು.

ಸುಪ್ರೀಂ ಕೋರ್ಟ್‌ನಿಂದ ನೇಮಕಗೊಂಡ ಪರಿಣಿತರ ಸಮಿತಿ ಕಳೆದ ಮೇ ತಿಂಗಳಲ್ಲಿ ತನ್ನ ಮಧ್ಯಂತರ ವರದಿ ನೀಡಿತ್ತು. ಗೌತಮ್ ಅದಾನಿ ಕಂಪನಿಗಳ ವಿರುದ್ಧದ ಆರೋಪಗಳಲ್ಲಿ ಯಾವುದೇ ಸಾಕ್ಷಿ ಕಂಡು ಬಂದಿಲ್ಲ. ಈ ವಿಷಯದಲ್ಲಿ ನಿಯಂತ್ರಕದ ವೈಫಲ್ಯವೂ ಆಗಿಲ್ಲ ಎಂದು ತಿಳಿಸಿತ್ತು.

## ಡಿಕೆಶಿ ಕರ್ಮಕಾಂಡ ಮುಚ್ಚಲೆಂದೇ ಎ.ಜಿ ಆಗಿ ಖಾಸಗಿ ವಕೀಲರ ನೇಮಕ



ಬೆಂಗಳೂರು, ನ. 24 - ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕರ್ಮಕಾಂಡವನ್ನು ಮುಚ್ಚಿ ಹಾಕಲೆಂದೇ ಖಾಸಗಿ ವಕೀಲರನ್ನು ಅಡ್ವೊಕೇಟ್ ಜನರಲ್ ಆಗಿ ಸರ್ಕಾರ ನೇಮಕ ಮಾಡಿಕೊಂಡಿದೆ ಎಂದು ಕೇಂದ್ರದ ಮಾಜಿ ಸಚಿವ ಹಾಗೂ ಬಿಜೆಪಿಯ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರು, ಉಪ ಮುಖ್ಯಮಂತ್ರಿ ಶಿವಕುಮಾರ್ ಅವರ ವಕೀಲರಾಗಿ ಹಲವು ಭ್ರಷ್ಟಾಚಾರ ಪ್ರಕರಣಗಳನ್ನು ಕೈಗೆತ್ತಿಕೊಂಡು ವಾದ ಮಂಡಿಸಿದ್ದರು ಎಂದು ಹೇಳಿದರು.

ದುರಂತದ ವಿಷಯವೆಂದರೆ, ಸರ್ಕಾರದ ಪ್ರಭಾವಿ ರಾಜಕಾರಣಿಯ ಖಾಸಗಿ ವಕೀಲರು ಅಡ್ವೊಕೇಟ್ ಜನರಲ್ ಆಗಿ ಶಿವಕುಮಾರ್ ಅವರ ಮೇಲೆ ನಡೆಯುತ್ತಿದ್ದ ಸಿಬಿಐ ತನಿಖೆಗೆ ಸರ್ಕಾರದ ಅನುಮತಿ ಹಿಂಪಡೆಯ ಬೇಕು ಎಂದು ಸಂಪುಟಕ್ಕೆ ಶಿಫಾರಸ್ಸು ಮಾಡುತ್ತಾರೆ. ಈ ಶಿಫಾರಸ್ಸಿನ ಕಾನೂನು ಮಾನ್ಯತೆ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆಯಾಗದೆ, ಅಂಗೀಕೃತ ವಾಗುತ್ತದೆ. ಇದು ಒಂದು ನಿಷ್ಪಕ್ಷಪಾತವಾದ ತನಿಖೆಗೆ ಕಾನೂನಿನ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಮಾಡಿದ ಪ್ರಹಸನ ಎಂದು ಟೀಕಿಸಿದರು.

ಸಚಿವ ಸಂಪುಟದಲ್ಲಿರುವ ಯಾವುದೇ ಸಚಿವರು, ಇದು ಚರ್ಚೆಯಾಗಬೇಕು ಎಂದು ಹೇಳದೆ, ಒಪ್ಪಿಗೆ ನೀಡಿರುವುದು ಹಲವು ಸಂಶಯಗಳನ್ನು ಹುಟ್ಟಿ ಹಾಕುತ್ತದೆ. ಶಿವಕುಮಾರ್ ಯಾವುದೇ ತಪ್ಪು ಮಾಡಿಲ್ಲ ಎಂದರೆ, ಸಿಬಿಐ ಮೇಲೆ ಭಯವೇಕೆ? ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ಅಧೀನದಲ್ಲಿರುವ ಪೊಲೀಸರಿಗೆ ಒಪ್ಪಿಸಿದರೆ, ಇವರ ಕರ್ಮಕಾಂಡವನ್ನು ಸುಲಭವಾಗಿ ಮುಚ್ಚಿ ಹಾಕಬಹುದು ಎಂದು ಯೋಜನೆ ಇದ್ದಂತಿದೆ ಎಂದು ಹೇಳಿದರು.

## ಕೊಟ್ಟೂರಿನಲ್ಲಿ ಇಂದು ಕ.ಸಾ.ಪ.ದಿಂದ ಕನ್ನಡ ರಾಜ್ಯೋತ್ಸವ

ಕೊಟ್ಟೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ ಎಂದು ಕಸಾಪ ಅಧ್ಯಕ್ಷ ದೇವರಮನಿ ಕೊಟ್ರೇಶ್ ತಿಳಿಸಿದ್ದಾರೆ.

ಡಾ.ಎಚ್.ಜಿ.ರಾಜ್ ಭವನದಲ್ಲಿ ನಡೆಯುವ ರಾಜ್ಯೋತ್ಸವ ಕಾರ್ಯಕ್ರಮ ವನ್ನು ಜಿಲ್ಲಾ ಕಸಾಪ ನಿಕಟ ಪೂರ್ವ ಅಧ್ಯಕ್ಷ ಸಿದ್ಧರಾಮ ಕಲ್ಮಠ ಉದ್ಘಾಟಿಸುವರು. ಹ.ಬೊ.ಹಳ್ಳಿಯ ಉಪನ್ಯಾಸಕ ಅಕ್ಕಿ ಬಸವೇಶ ಅವರು, ಕನ್ನಡ ನಾಡು ನುಡಿ ಹಾಗೂ ಕರ್ನಾಟಕ ನಾಮಕರಣದ ಮಹತ್ವ ಕುರಿತು ವಿಶೇಷ ಉಪನ್ಯಾಸ ನೀಡುವರು. ಜಿಲ್ಲಾ ಕಸಾಪ ಅಧ್ಯಕ್ಷ ನಿಷ್ಠಿ ರುದ್ರಪ್ಪ ಅಧ್ಯಕ್ಷತೆ ವಹಿಸುವರು.

ತಹಶೀಲ್ದಾರ್ ಜಿಕೆ ಅಮರೇಶ, ಕಲಾಕೇಂದ್ರ ಅಧ್ಯಕ್ಷ ಎಂಎಜೆ ಸತ್ಯಪ್ರಕಾಶ, ಜಿಪಂ ಮಾಜಿ ಸದಸ್ಯ ಎಂಎಜೆ ಹರ್ಷವರ್ಧನ ಇತರರು ಅತಿಥಿಗಳಾಗಿ ಆಗಮಿಸುವರು. ಕಾರ್ಯಕ್ರಮಕ್ಕೂ ಮೊದಲು ನಡೆಯುವ ತಾಯಿ ಭುವನೇಶ್ವರಿ ಭಾವಚಿತ್ರದ ಮೆರವಣಿಗೆಗೆ ಬಿಇಒ ಪದ್ಮನಾಭ ಕರಣಂ, ವರ್ತಕ ಪಿ.ಶ್ರೀಧರಶೆಟ್ಟಿ ಚಾಲನೆ ನೀಡುವರು ಎಂದು ತಿಳಿಸಿದ್ದಾರೆ.

## ಬಾಕಿ ಉಳಿಸಿಕೊಳ್ಳುವಂತಿಲ್ಲ : ಸುಪ್ರೀಂ

**(1ನೇ ಪುಟದಿಂದ)** ಉಳಿಸಿಕೊಳ್ಳಲು ಬಯಸಿದರೆ, ಅದನ್ನು ಶಾಸಕಾಂಗಕ್ಕೆ ಮರು ಪರಿಶೀಲನೆಗಾಗಿ ವಾಪಸ್ ಕಳಿಸುವುದು ತಾರ್ಕಿಕ ಮಾರ್ಗವಾಗಿದೆ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

## ಡೀಪ್‌ಫೇಕ್ ಕಂಡು ಬಂದರೆ ಜಾಲತಾಣಗಳ ವಿರುದ್ಧ ಕ್ರಮ

**(1ನೇ ಪುಟದಿಂದ)** ಉಲ್ಲಂಘನೆಯನ್ನು ಇನ್ನು ಮುಂದೆ ಸಹಿಸುವುದಿಲ್ಲ ಎಂದೂ ಚಂದ್ರಶೇಖರ್ ಹೇಳಿದ್ದಾರೆ. ಡೀಪ್‌ಫೇಕ್ ರೀತಿಯ ವರ್ತನೆಗಳು ಕಂಡು ಬಂದಾಗ ಜಾಲತಾಣ ಕಂಪನಿಗಳ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗುವುದು. ಇದರ ಮೂಲ ಯಾವುದು ಎಂಬುದನ್ನು ಕಂಪನಿಗಳು ತಿಳಿಸಿದ ನಂತರ, ಅಂತಹ ಮೂಲಗಳ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗುವುದು ಎಂದು ಸಚಿವರು ವಿವರಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಉತ್ತರ 40x60 ಅಕ್ಕ-ಪಕ್ಕ, (40 ಅಡಿ ರಸ್ತೆ ಮತ್ತು 110 ಅಡಿ ರಸ್ತೆ) ದಕ್ಷಿಣ 30x45, ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x39, ಪೂರ್ವ 30x50.
ಐಗೂರು ವಿಜಯಕುಮಾರ
99457 02495

**ಕಾರ್ನರ್ ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಎ' ಬ್ಲಾಕ್ ಪೂರ್ವ-ದಕ್ಷಿಣ ದಿಕ್ಕಿನ ಕಾರ್ನರ್ 44x60, ಹಳೇ ಬನಶಂಕರಿ ಪೂರ್ವ-ಉತ್ತರ ಕಾರ್ನರ್ 40x50, ಪೂರ್ವ-ದಕ್ಷಿಣ ಕಾರ್ನರ್ 40x65 ಹಾಗೂ ಪೂರ್ವ 50x80 (60 ಅಡಿ ರಸ್ತೆ)
ಐಗೂರು ವಿಜಯಕುಮಾರ
99457 02495

**2 BHK ಮನೆ ಬಾಡಿಗೆಗಿದೆ**
ಶಾಮನೂರು ಆಂಜನೇಯ ಸ್ವಾಮಿ ದೇವಸ್ಥಾನದ ಹಿಂದಿನ ರಸ್ತೆಯಲ್ಲಿ 2 BHK ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ :
98864-42434, 80885-88246
(ಸಸ್ಯಹಾರಿಗಳಿಗೆ ಮಾತ್ರ)

**ಮನೆ ಬಾಡಿಗೆಗೆ ಇದೆ**
ಪೂರ್ವ ದಿಕ್ಕಿನ 2 ಬೆಡ್ ರೂಂವುಳ್ಳ 2ನೇ ಫ್ಲೋರ್‌ನಲ್ಲಿ ಮನೆ ಬಾಡಿಗೆಗೆ ಇದೆ.
ವಿಳಾಸ : ಲೇಬರ್ ಕಾಲೋನಿ, ನಿಟ್ಟುವಳ್ಳಿ ರೋಡ್, ದಾವಣಗೆರೆ.
99866 17483, 96206-92911
(ಸಸ್ಯಹಾರಿಗಳಿಗೆ ಮಾತ್ರ)

**ಸೈಟು ಮಾರಾಟಕ್ಕಿದೆ**
30x40 ಪೂರ್ವ ದಿಕ್ಕು ಸರ್ಕಾರಿ ನೌಕರರ ಬಡಾವಣೆಯ ಎದುರುಗಡೆ (ಪೆಟ್ರೋಲ್ ಬಂಕ್ ಹಿಂಭಾಗ NH4) ಸರ್ವಮಂಗಳ ಲೇಔಟ್ ಪಕ್ಕ, ದಾವಣಗೆರೆ, ಸಂಪರ್ಕಿಸಿ :
97380 14849

**1 ಬೆಡ್‌ರೂಂ ಮನೆ ಲೀಸ್‌ಗೆ ಇದೆ**
ಕೆ.ಬಿ. ಎಕ್ಸ್‌ಟೆನ್ಷನ್‌ನಲ್ಲಿ ಉತ್ತಮ ನೀರಿನ ಸೌಕರ್ಯ ಇರುವ ಮನೆ (Anti-Skid Bathroom tiles ಸಹ ಹೊಂದಿದೆ)
ಮೊ : 63615 12585

**ಬೇಕಾಗಿದ್ದಾರೆ**
ಡಿಪ್ಲೋಮಾ/ಐಟಿಐ ಆಗಿರುವ ಹುಡುಗರು ಸೋಲಾರ್ ಪ್ಲಾಂಟ್ ಇನ್‌ಸ್ಟಾಲೇಷನ್‌ಗೆ ಬೇಕಾಗಿದ್ದಾರೆ.
ಮೆ॥ ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
# 43H, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
99001 42052

**ಸೈಟುಗಳು ಮಾರಾಟಕ್ಕಿವೆ**
ಸುಬ್ರಮಣ್ಯ ನಗರ, ಹೈಟೆಕ್ ಆಸ್ಪತ್ರೆ ಹತ್ತಿರ, ಪುನೀತ್ ಬಡಾವಣೆ ಪಶ್ಚಿಮ ಮುಖದ 30x50 ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98443 04848

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಸಮೀಪ ರಾಷ್ಟ್ರೀಯ ಹೆದ್ದಾರಿ ಹತ್ತಿರ ಕೊಗ್ಗನೂರು ಬಳಿ 30 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99000 12266

**ಮನೆ ಬಾಡಿಗೆಗಿದೆ**
2 BHK, ನೆಲ ಮಹಡಿ, ಎಂ.ಸಿ.ಸಿ. ಎ ಬ್ಲಾಕ್, 5ನೇ ಕ್ರಾಸ್, ಬಸವೇಶ್ವರ ಮಂಟಪದ ಹತ್ತಿರ, ದಾವಣಗೆರೆ.
76766 65511

**ಕಾರುಗಳು ಮಾರಾಟಕ್ಕಿವೆ**
Swift ZDI 2014
Hyundai Creta 2016
Wagon-R VXI 2017
I10 Grand automatic 2017
ದೈವಿಕ್ ಐನಳ್ಳಿ
99456 43223

**SHOP FOR RENT**
12'X12' MAMA'S JOINT ROAD MISHRA PEDA BUILDING MCC 'B' BLOCK, DAVANAGERE
98440 64565

**ಪಾಸ್‌ಪೋರ್ಟ್ ಕಳೆದಿರುತ್ತದೆ**
ದಿನಾಂಕ : 22.11.2023 ರಂದು ಸಮಯ ಸುಮಾರು 6.00 ಘಂಟೆ ಸಾಯಂಕಾಲ ಬಿ.ಆರ್. ಹೇಮಲತಾ ಬೈಕ್‌ನಲ್ಲಿ ಹೋಗುವಾಗ ಹೇಮಾವತಿ ಹಾಸ್ಟೆಲ್ ರೋಡ್‌ನಲ್ಲಿ ಪಾಸ್‌ಪೋರ್ಟ್ (W6871860) ಕಳೆದಿರುತ್ತದೆ. ಸಿಕ್ಕವರು ಈ ಮೊಬೈಲ್ ನಂ.ಗೆ ಕರೆ ಮಾಡಿ.
94803 03855

**ರೂಂ ಬಾಡಿಗೆಗಿದೆ**
ಸಿಂಗಲ್ ಅಟ್ಯಾಚ್ಡ್ ರೂಂ ಮೊದಲನೇ ಮಹಡಿಯಲ್ಲಿ ಹಾಗೂ ಬೋರ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ರೂಂ ಬಾಡಿಗೆಗಿದೆ. ನಂ. 651. ಶ್ರೀ ಕಟೀಲು, 6 ನೇ ಕ್ರಾಸ್, ಹದಡಿ ರಸ್ತೆ, ಶ್ರೀನಿವಾಸ ನಗರ, ದಾವಣಗೆರೆ.
7019427951, 9341014488

**ಮನೆ ಬಾಡಿಗೆಗಿದೆ**
ಗ್ರೌಂಡ್ ಫ್ಲೋರ್, 2 BHK ಪಶ್ಚಿಮ ದಿಕ್ಕು, ಬೋರ್, ಮುನ್ಸಿಪಲ್ ನೀರಿನ ಸೌಲಭ್ಯವಿದೆ. #576. ಸತ್ಯನಿವಾಸ, 1ನೇ ಕ್ರಾಸ್, 4ನೇ ಮೇನ್ ಎ ಬ್ಲಾಕ್, ಡಿಸಿಎಂ ಟೌನ್ ಶಿಪ್, ಇಂಡಿಯಾ ಓನ್ ಎಟಿಎಂ ಹತ್ತಿರ, ದಾವಣಗೆರೆ.
7019427951 – 9341014488
(ಸಸ್ಯಹಾರಿಗಳಿಗೆ ಮಾತ್ರ)

**ಷೇರು ಸರ್ಟಿಫಿಕೇಟ್ ಕಳೆದಿದೆ**
ದಾವಣಗೆರೆ ತಾಲ್ಲೂಕು ಹದಡಿ ಗ್ರಾಮದ ವಾಸಿ ಕರಿಯಪ್ಪ ಬಿನ್ ಲೇಟ್ ಹನುಮಂತಪ್ಪ ಎಂಬ ಹೆಸರಿನ ದಾವಣಗೆರೆ ಶುಗರ್ ಮಿಲ್ಸ್ ಕುಕ್ಕುವಾಡ ದಾವಣಗೆರೆ ಇದರ ಷೇರು ಸರ್ಟಿಫಿಕೇಟ್ ಮನೆ ಸ್ವಚ್ಛ ಮಾಡುವಾಗ ಕಳೆದಿದೆ, ಯಾರಿಗಾದರೂ ಸಿಕ್ಕರೆ ಈ ಕೆಳಗಿನ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ತಿಳಿಸುವಂತೆ ಕೋರಿದೆ.
ಕರಿಯಪ್ಪ : 96202 42982

**ಬೇಕಾಗಿದ್ದಾರೆ**
ನಮ್ಮ ಕಂಪನಿಯಲ್ಲಿ ಮಾರ್ಕೆಟಿಂಗ್ ಮ್ಯಾನೇಜರ್ ಆಗಿ ಕೆಲಸ ಮಾಡಲು ಅನುಭವಿಗಳು ಬೇಕಾಗಿದ್ದಾರೆ.
ಆರ್ಗಾನಟಿಕ್ಸ್ ಇನ್ನೋವೇಷನ್ಸ್ ಪ್ರೈ. ಲಿ.
ಲಾಳಿ ಹನುಮಮ್ಮ ಬಿಲ್ಡಿಂಗ್, S.S. ಬಡಾವಣೆ, ಶಾಮನೂರು ರಸ್ತೆ, ದಾವಣಗೆರೆ.
ಮೊ : 93414 32084

**ಮಷೀನ್ ಮಾರಾಟಕ್ಕಿದೆ**
ಫುಲ್ ಆಟೋಮ್ಯಾಟಿಕ್ ಡಬಲ್ ಡೈ ಪೇಪರ್ ಪ್ಲೇಟ್ ಮಷೀನ್ ಮಾರಾಟಕ್ಕಿದೆ.
ಸಂಪರ್ಕಿಸಿ :
84960 60333

**0% Interest, EMI Available***
ನಮ್ಮಲ್ಲಿ ಎಲ್ಲಾ ಕಂಪನಿಯ ಮೊಬೈಲ್‌ಗಳು ಕಂತುಗಳ ಮೂಲಕ
* ಆಕರ್ಷಕ ಬೆಲೆಯಲ್ಲಿ ಖರೀದಿಸಬಹುದು.
ಗಣೇಶ್ ಮೊಬೈಲ್ಸ್
ಹದಡಿ ರೋಡ್, ದಾವಣಗೆರೆ.
99807 28444

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದವಾಡ ಸೈ. ನಂ. 44 (30x50) ಪಶ್ಚಿಮ, ನೈಋತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ॥ ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಕಾರ್ ಡ್ರೈವರ್ ಬೇಕಾಗಿದ್ದಾರೆ**
ಲೈಸೆನ್ಸ್ ಹಾಗೂ ದ್ವಿಚಕ್ರವಾಹನ ಹೊಂದಿರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
94486 56091
(ಮೇಲ್ಕಂಡ ನಂಬರಿಗೆ ಈ ಹಿಂದೆ ಸಂಪರ್ಕಿಸಿದವರು ಪುನಃ ಸಂಪರ್ಕಿಸಬೇಡಿರಿ)

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 20 ಕಿ.ಮೀ. ದೂರದಲ್ಲಿರುವ ಎರಡೂವರೆ (2 1/2) ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. ಸಂಪರ್ಕಿಸಿ :
94483 38709
74830 48533

**ಬೇಕಾಗಿದ್ದಾರೆ**
ಆನಗೋಡು ಸಮೀಪ NH 48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆನಗೋಡು ಸುತ್ತ-ಮುತ್ತ ಇರುವ ಉತ್ಸಾಹಿ ಯುವಕರು ಬೇಕಾಗದ್ದಾರೆ ಮತ್ತು 20 KL ಟ್ಯಾಂಕರ್ ಲಾರಿಯಲ್ಲಿ ಕಂಡಕ್ಟರ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
90082 28222, 63606 11836

**ACCOUNTANT FEMALE**
Experienced accountant Required for reputed Plywood Company in APMC YARD. Opp: DCM TOWNSHIP, DVG.
94495 85680

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಮಹಿಳೆ/ಪುರುಷ ಬೇಕಾಗಿದ್ದಾರೆ.
ಸಂಪರ್ಕಿಸಿರಿ :
08192 254736

**WANTED**
Fresher's & Learner's Required for Auditor Office
Contact :
77607 40760

**ಪೂರ್ವ ದಿಕ್ಕಿನ ಕಾರ್ನರ್ ಸೈಟು ಮಾರಾಟಕ್ಕಿದೆ**
ದಾವಣಗೆರೆಯ ಪೈಲ್ವಾನ್ ಚನ್ನಬಸಪ್ಪ ಲೇಔಟ್‌ನಲ್ಲಿ (ಕರಿಗೌಡ್ರು ಲೇಔಟ್) 60 ಅಡಿ ರೋಡಿಗೆ ಹೊಂದಿಕೊಂಡಿರುವ ಪೂರ್ವ-ಉತ್ತರ ಕಾರ್ನರ್ ಸೈಟು ಮಾರಾಟಕ್ಕಿರುತ್ತದೆ. ಸೈಟ್ ಅಳತೆ : 1906 ಚ. ಅಡಿ ಗಳಿರುತ್ತದೆ. ಸೈಟ್ ನಂ. 64. ಸಂಪರ್ಕಿಸಿ :
98458 16221

**ಶಿವ ಸೈಬರ್ ಕೆಫೆ**
ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಮಾಡಲು ಹುಡುಗರು ಮತ್ತು ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
98808 23450

**ಮನೆ ಮಾರಾಟಕ್ಕೆ ಇದೆ**
ಹರಿಹರದ ವಿದ್ಯಾನಗರ A ಬ್ಲಾಕ್, 60 ಅಡಿ ರಸ್ತೆಯಲ್ಲಿ 40 x 60 ಸೈಟಿನಲ್ಲಿ ಕಟ್ಟಿರುವ ಸುಸಜ್ಜಿತವಾದ ಡುಪ್ಲೆಕ್ಸ್ ಮನೆ ಮಾರಾಟಕ್ಕೆ ಇದೆ.
ಸಂಪರ್ಕಿಸಿ.
99862 45329


**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, 5ನೇ ಮೇನ್, # 1978/3, ಶ್ರೀನಿಧಿ 30x50 ನಿವೇಶನದಲ್ಲಿ ನಿರ್ಮಿಸಿರುವ 1200 ಚ. ವಿಸ್ತೀರ್ಣ, 2 BHK ಮನೆ ಮಾರಾಟಕ್ಕಿದೆ.
ಶ್ರೀ ಡಿ. ವೆಂಕಟೇಶ್ ರಾವ್
95357 81770

**ಜಮೀನು ಮಾರಾಟಕ್ಕಿದೆ**
ಸೊಕ್ಕೆ ಹೋಬಳಿ-ಮಾಗಡಿ ಗ್ರಾಮದ ಸ.ನಂ.ನಲ್ಲಿರುವ 5 ಎಕರೆ ಕೆಂಪು ಮಣ್ಣಿನಿಂದ ಕೂಡಿರುವ ಜಮೀನು ಮಾರಾಟಕ್ಕಿದೆ.
91108 75944

**ಅಕೌಂಟೆಂಟ್ ಬೇಕಾಗಿದ್ದಾರೆ**
ಟ್ಯಾಲಿ ಅನುಭವವುಳ್ಳವರು ಮಹಿಳೆಯರು ಹಾಗೂ ಪುರುಷರು ಬೇಕಾಗಿದ್ದಾರೆ ಮತ್ತು ಪ್ಯಾಕಿಂಗ್ ಕೆಲಸಕ್ಕೆ ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
90366 11313, 96327 57065

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

## ನಗರದ ಶ್ರೀ ದಾನಮ್ಮ ದೇವಸ್ಥಾನದಲ್ಲಿ 28 ರಿಂದ ಪುರಾಣ, ಪ್ರವಚನ



ದಾವಣಗೆರೆ, ನ.24- ನಗರದ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ಗುಡ್ಡಾಪುರದ ದಾನಮ್ಮ ದೇವಿ ದೇವಸ್ಥಾನದಲ್ಲಿ ದಿನಾಂಕ 28ರಿಂದ ಬರುವ ಡಿಸೆಂಬರ್ 11 ರವರೆಗೆ ಪ್ರತಿದಿನ ಸಂಜೆ 7 ಗಂಟೆಗೆ ಪುರಾಣ, ಪ್ರವಚನ ನಡೆಯಲಿದೆ.

ಶ್ರೀ ಪುಟ್ಟರಾಜ ಕವಿ ಗವಾಯಿಗಳವರಿಂದ ರಚಿತವಾದ ಶಿವಶರಣೆ ಗುಡ್ಡಾಪುರದ ದಾನಮ್ಮದೇವಿಯ ಪುರಾಣ ಮತ್ತು ಶ್ರೀ ಅಕ್ಕಮಹಾದೇವಿಯ ಚರಿತ್ರೆ ಪ್ರವಚನವನ್ನು ಶ್ರೀ ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ವೇ. ಮಹಾಂತೇಶ ಶಾಸ್ತ್ರಿಗಳು ಹಿರೇಮಠ (ಕಲ್ಲೂರು, ಚನ್ನಗಿರಿ) ಇವರು ನಡೆಸಿಕೊಡುವರು. ಸ್ಥಳೀಯ ಶ್ರೀ ವೀರೇಶ್ವರ ಪುಣ್ಯಾಶ್ರಮದ ಯಲಗೂರೇಶ ಟಕ್ಕಳಿಕಿ ಅವರು ತಬಲಾ ವಾದನ ನುಡಿಸುವರು.

ಬರುವ ಡಿಸೆಂಬರ್ 12 ರ ಮಂಗಳವಾರ ಛಟ್ಟಿ ಅಮಾವಾಸ್ಯೆ ಇದ್ದು, ಅಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಮುತ್ತೈದೆಯರಿಗೆ ಉಡಿ ತುಂಬುವುದು, ಮದುವೆ ಆಗುವವರಿಗೆ ಕಂಕಣ ದಂಡಿ ಹಾಕಿಸುವ ಕಾರ್ಯಕ್ರಮ ಜರುಗಲಿದೆ.

ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಶ್ರೀಮತಿ ದೇವರಮನೆ ಗಂಗಮ್ಮ ಮತ್ತು ಮಕ್ಕಳು (ದಾವಣಗೆರೆ), ಶ್ರೀಮತಿ ವೈ. ಭಾರತಿ ಮತ್ತು ವೈ.ವೆಂಕಟೇಶ ರೆಡ್ಡಿ (ಬೆಂಗಳೂರು) ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

## ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ : ನಗರದಲ್ಲಿ ಇಂದು ಉಪನ್ಯಾಸ



ಜಿಲ್ಲಾ ವಕೀಲರ ಸಂಘದ ವತಿಯಿಂದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿರುವ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಸಂವಿಧಾನ ದಿನಾಚರಣೆ ಅಂಗವಾಗಿ ಜಿಲ್ಲಾ ವಕೀಲರ ಸಂಘದಿಂದ ಉಪನ್ಯಾಸ ಮಾಲಿಕೆ 3 ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ ವಿಷಯ ಕುರಿತು ಇಂದು ಮಧ್ಯಾಹ್ನ 3 ಗಂಟೆಗೆ ಕಾರ್ಯಕ್ರಮ ಆಯೋಜಿಸಲಾಗಿದೆ.

ರಾಜ್ಯದ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಹೆಚ್.ಪಿ. ಸಂದೇಶ್ ಕಾರ್ಯಕ್ರಮವನ್ನು ಉದ್ಘಾಟಿಸಿ, ವಿಶೇಷ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಜಿಲ್ಲಾ ಕಾ.ಸೇಪ್ರಾ.ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣವರ್ ಆಗಮಿಸಲಿದ್ದು, ಅಧ್ಯಕ್ಷತೆಯನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ವಹಿಸಲಿದ್ದಾರೆ

## ರಾಣೇಬೆನ್ನೂರು : ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬೇಲೂರು, ಹೀಲದಹಳ್ಳಿ, ಅಂಕಸಾಪುರ ಮತ್ತು ಉದಗಟ್ಟಿ ಗ್ರಾಮಗಳು, ಮೆಡ್ಲೇರಿ, ಹಿರೇಬಿದರಿ, ಕೋಣನತಂಬಗಿ, ಅರೇಮಲ್ಲಾಪುರ, ಸೋಮಲಾಪುರ, ಐರಣಿ, ರಾಹುತನಕಟ್ಟಿ, ಯಕ್ಲಾಸಪುರ ಮತ್ತು ಯಲ್ಲಾಪುರ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

ಚಳಗೇರಿ, ಕರೂರು, ಹುಣಸಿಕಟ್ಟಿ, ಎಣ್ಣಿಹೊಸಳ್ಳಿ, ಹೂಲಿಕಟ್ಟಿ, ವಡೆರಾಯನಹಳ್ಳಿ, ನದಿಹರಳಹಳ್ಳಿ, ಕಮದೋಡ, ದೇವಗೊಂಡನಕಟ್ಟಿ ಮತ್ತು ಮಾಗೋಡ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ. ರಾಣೇಬೆನ್ನೂರಿನ ಕುಡಿಯುವ ನೀರು ಸರಬರಾಜಿನ ಮುದೇನೂರು ವಾಟರ್ ಸಪ್ಲೈ, ವೆಂಕಟೇಶ್ವರ ಹ್ಯಾಚರಿ, ರಾಮ್ಕೊ ಫ್ಯಾಕ್ಟರಿಗಳಿಗೂ ವಿದ್ಯುತ್ ಸರಬರಾಜು ಇರುವುದಿಲ್ಲ.

# ಪ್ರತಿಯೊಬ್ಬರೂ ದುಡಿಮೆ ಮಾಡಿ ಪ್ರಗತಿ ಸಾಧಿಸಬೇಕು



### ಉಚ್ಚಂಗಿದುರ್ಗದ ಕಾರ್ಯಕ್ರಮದಲ್ಲಿ ಶ್ರೀ ರೇವಣಸಿದ್ದೇಶ್ವರ ರಾಜಗುರು ಕಟ್ಟಿಮನೆ ಮಹಾಸ್ವಾಮೀಜಿ ಆಶಯ

ಹರಪನಹಳ್ಳಿ, ನ.24- ತಾಲ್ಲೂಕಿನ ಉಚ್ಚಂಗಿದುರ್ಗ ಗ್ರಾಮದಲ್ಲಿ ಉಚ್ಚಂಗೆಮ್ಮ ದೇವಿ ಪಾದಗಟ್ಟೆ ದೇವಸ್ಥಾನದ ಉದ್ಘಾಟನಾ ಸಮಾರಂಭವು ಇಂದು ನಡೆಯಿತು.

ಪೂಜೆಯನ್ನು ನೆರವೇರಿಸಿ ಸಾನ್ನಿಧ್ಯ ವಹಿಸಿ ಶ್ರೀ ರೇವಣಸಿದ್ದೇಶ್ವರ ರಾಜಗುರು ಕಟ್ಟಿಮನೆ ಮಹಾಸ್ವಾಮೀಜಿ ಮಾತನಾಡಿ, ಉಚ್ಚಂಗೆಮ್ಮ ದೇವಿಗೆ ದಿನವೂ ಸಹಸ್ರಾರು ಭಕ್ತರು ಬರುವುದರಿಂದ ಈ ಗ್ರಾಮ ಹೆಸರುವಾಸಿಯಾಗಿದೆ. ಪ್ರತಿಯೊಬ್ಬರೂ ದುಡಿಮೆ ಮಾಡಿ ಪ್ರಗತಿ ಸಾಧಿಸಬೇಕು, ಬಸವಣ್ಣನವರಂತೆ ಕಾಯಕವೇ ಕೈಲಾಸ ಎಂದು ನಂಬಿದವರು. ಈ ಗ್ರಾಮ ಎಲ್ಲದರಲ್ಲೂ ಮುಂದುವರೆದಿದೆ, ಶೈಕ್ಷಣಿಕವಾಗಿ ಮುಂದುವರೆಯಬೇಕಾಗಿದೆ, ಹೊಸದಾಗಿ ಪದವಿ ಕಾಲೇಜುಗಳನ್ನು ತೆರೆಯಬೇಕು ಎಂದು ಹೇಳಿದರು.

ದೇವಸ್ಥಾನವನ್ನು ಉದ್ಘಾಟಿಸಿ ಮಾತನಾಡಿದ ಕೆಪಿಸಿಸಿ ಸದಸ್ಯ ಕಲ್ಲೇಶ್‌ರಾಜ್ ಪಾಟೀಲ್ ಮಾತನಾಡಿ, ಪಾದಗಟ್ಟಿ ಹತ್ತಿರ ರೇಣುಕಾ ದೇವಿಯ ಮೂರ್ತಿ ಹಾಗೂ ಕಟ್ಟಡವನ್ನು ಗ್ರಾಮದ ಎಲ್ಲಾ ಭಕ್ತರು ಸೇರಿ ದೇವಿಯ ಜೀರ್ಣೋದ್ಧಾರ ಮಾಡಿದ್ದಾರೆ. ಗುಡ್ಡ ಹತ್ತಿ ಹೋಗಿ ದೇವಿಯ ದರ್ಶನ ಮಾಡಲು ಆಗದ ಭಕ್ತರಿಗೆ ಪಾದಗಟ್ಟಿ ಹತ್ತಿರ ದರ್ಶನ ಮಾಡಲು ಕೋಟ್ಯಂತರ ಭಕ್ತರಿಗೆ ಅನುಕೂಲ ವಾಗಿದೆ. ಬರಗಾಲ ಬಂದಿದೆ, ಅದನ್ನು ಎದುರಿಸುವಂತಹ ಶಕ್ತಿಯನ್ನು ಆ ದೇವಿ ಕರುಣಿಸಲಿ. ಮುಂದಿನ ದಿನಗಳಲ್ಲಿ ಒಳ್ಳೆಯ ಮಳೆ, ಬೆಳೆಯಾಗಲೆಂದು ಆ ದೇವಿಯಲ್ಲಿ ಪ್ರಾರ್ಥಿಸುತ್ತೇನೆ ಎಂದು ಹೇಳಿದರು.

ರೇಣುಕಾ ದೇವಿ ಜೀರ್ಣೋದ್ಧಾರ ಸೇವಾ ಸಮಿತಿ ಅಧ್ಯಕ್ಷ ಶಿವನಾಪ್ಪ ಹನುಮಂತಪ್ಪ ಮಾತನಾಡಿ, ಪಾದಗಟ್ಟೆ ಹತ್ತಿರ ನಿರ್ಮಿಸಿರುವ ಒಂದು ಕೋಟಿ ರೂ. ವೆಚ್ಚದಲ್ಲಿ ಭಕ್ತರೆಲ್ಲಾ ಸೇರಿ ನಿರ್ಮಿಸಿದ್ದೇವೆ. ಸರ್ಕಾರದಿಂದ ಯಾವುದೇ ಅನುದಾನವಿಲ್ಲ. ಎಸ್.ವಿ. ರಾಮಚಂದ್ರಪ್ಪ ಐದು ಲಕ್ಷ ಹಣ ನೀಡಿದ್ದಾರೆ. ದೇವಸ್ಥಾನಕ್ಕೆ ಬರುವ ಭಕ್ತರಿಗೆ ಶೌಚಾಲಯ ವ್ಯವಸ್ಥೆಯಿಲ್ಲ, ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಶೌಚಾಲಯ ನಿರ್ಮಿಸಿ ಕೊಡಬೇಕು.ಮುಜರಾಯಿ ಇಲಾಖೆಯಿಂದ ಯಾವುದೇ ಹಣ ಬಿಡುಗಡೆ ಆಗಿಲ್ಲ, ಹಣ ಇದ್ದರೂ ಖರ್ಚು ಮಾಡುತ್ತಿಲ್ಲ ಎಂದು ಹೇಳಿದರು.

ಇಂದು ಬೆಳಗ್ಗೆ ರೇಣುಕಾ ದೇವಿಗೆ ಯಜ್ಞ, ಯಾಗಾದಿ, ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ ಕಾರ್ಯಕ್ರಮಗಳು ನಡೆದವು.

ಈ ಸಂದರ್ಭದಲ್ಲಿ ಶಾಸಕ ದೇವೇಂದ್ರಪ್ಪನವರ ಪುತ್ರ ಕೀರ್ತಿರಾಜ್, ಶಿವಕುಮಾರ್ ಸ್ವಾಮಿ, ನಿವೃತ್ತ ಶಿಕ್ಷಕರಾದ ಅಂಜಿನಪ್ಪ, ಈರಣ್ಣ, ಮುಖಂಡರಾದ ಬೇವಿನಹಳ್ಳಿ ಕೆಂಚನಗೌಡ, ಮಂಜುನಾಥ್ ಗೌಡ, ಅಜ್ಮತ್ ಉಲ್ಲಾ ಸಾಬ್, ರವಿಗೌಡ್ರು, ಎನ್.ಸಿ. ಸಿದ್ದನಗೌಡ್ರು, ರಫಿಕ್ ಸಾಬ್, ಮಂಜುನಾಥ್, ಕುಮಾರ್ ಮತ್ತು ಇತರರು ಹಾಜರಿದ್ದರು.

## ಶ್ಯಾಗಲೆಯಲ್ಲಿ ಇಂದಿನಿಂದ ಎನ್.ಎಸ್.ಎಸ್ ಶಿಬಿರ

ದಾವಣಗೆರೆ ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ರೂಸಾ ಅನುದಾನಿತ ದಾವಣಗೆರೆ NA C'B' ++ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆಯ ಘಟಕ-1 ಮತ್ತು 2ರ ವಿಶೇಷ ವಾರ್ಷಿಕ ಶಿಬಿರವನ್ನು ದಾವಣಗೆರೆ ತಾಲ್ಲೂಕಿನ ಶ್ಯಾಗಲೆ ಗ್ರಾಮದಲ್ಲಿ ಇಂದಿನಿಂದ ಬರುವ ಡಿಸೆಂಬರ್ 1 ರವರೆಗೆ ಹಮ್ಮಿಕೊಳ್ಳಲಾಗಿದೆ.

ಇಂದು ಸಂಜೆ 5:30ಕ್ಕೆ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆ ಸಮಾರಂಭವನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ಎಂ. ಮಂಜಣ್ಣ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಕೆ.ಎಸ್. ಬಸವಂತಪ್ಪ ಮುಖ್ಯಅತಿಥಿಗಳಾಗಿ ಆಗಮಿಸುವರು.

ಶ್ಯಾಗಲೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶೋಭಮ್ಮ, ಉಪಾಧ್ಯಕ್ಷೆ ಎಸ್. ಮಂಜಮ್ಮ, ನಗರ ಪಾಲಿಕೆ ಸದಸ್ಯ ಜಿ.ಎಸ್. ಮಂಜುನಾಥ್ ಗಡಿಗುಡಾಳ್, ಶ್ಯಾಗಲೆ ಪಶು ವೈದ್ಯಾಧಿಕಾರಿ ಡಾ. ನಾಗರಾಜ್, ಬಿ.ಸಿ. ಸಿದ್ದಪ್ಪ, ಡಾ. ಕೆ. ಎಂ. ಮಂಜುನಾಥ್ ಶ್ಯಾಗಲೆ, ಡಾ. ಎಂ.ಪಿ. ಭೀಮಪ್ಪ, ಟಿ. ಶೇಷಪ್ಪ ಸೇರಿದಂತೆ ಇನ್ನಿತರೆ ಅತಿಥಿ ಗಣ್ಯರು ಭಾಗವಹಿಸುವರು.

## ನಗರದಲ್ಲಿ ಇಂದು ಅಂಚೆ ಮನರಂಜನಾ ಕೂಟದಿಂದ ರಾಜ್ಯೋತ್ಸವ

ಭಾರತೀಯ ಅಂಚೆ ಇಲಾಖೆಯ ಅಂಚೆ ಮನರಂಜನಾ ಕೂಟದಿಂದ ಇಂದು ಅಪರಾಹ್ನ 3.30ಕ್ಕೆ ಪ್ರಧಾನ ಅಂಚೆ ಕಛೇರಿಯ ಸಭಾಂಗಣದಲ್ಲಿ 68ನೇ ಕನ್ನಡ ರಾಜ್ಯೋತ್ಸವ ಸಮಾರಂಭ ನಡೆಯಲಿದೆ. ಸಮಾರಂಭದ ಅಧ್ಯಕ್ಷತೆಯನ್ನು ಪ್ರಧಾನ ಅಂಚೆ ಕಚೇರಿಯ ಅಂಚೆ ಪಾಲಕರಾದ ಶ್ರೀಮತಿ ಸರಸ್ವತಿ ಡಿ. ಜೋಶಿ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಅಂಚೆ ಅಧೀಕ್ಷಕ ಚಂದ್ರಶೇಖರ್, ಉಪ ಅಂಚೆ ಅಧೀಕ್ಷಕ ಜೆ.ಎಸ್. ಗುರುಪ್ರಸಾದ್, ಉಪ ಅಂಚೆ ಅಧೀಕ್ಷಕ ನರೇಂದ್ರನಾಯಕ್ ಕೆ.ಎಂ, ಅಂಚೆ ನಿರೀಕ್ಷಕ ಅಶ್ವತ್ಥ್ ವಿ, ಚನ್ನಗಿರಿ ಉಪ ಅಂಚೆ ನಿರೀಕ್ಷಕ ಸ್ವಾಮಿ ಜೆ.ಡಿ. ವಿಶೇಷ ಆಹ್ವಾನಿತರಾಗಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಆಗಮಿಸಲಿದ್ದಾರೆ.

## ಆಂಜನೇಯ ಬಡಾವಣೆಯಲ್ಲಿ ಇಂದು ರಾಜ್ಯೋತ್ಸವ

ಆಂಜನೇಯ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ವತಿಯಿಂದ ಇಂದು ಸಂಜೆ 5.30 ರಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಗುವುದು. ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಕುಸುಮ ಲೋಕೇಶ್ ಅಧ್ಯಕ್ಷತೆ ವಹಿಸುವರು. ಸಮಿತಿಯ ಗೌರವಾಧ್ಯಕ್ಷ ಕೆ. ಎಸ್. ಈಶ್ವರಪ್ಪ ಪ್ರಸ್ತಾವಿಕ ನುಡಿಯಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಸವರಾಜ್ ಹನುಮಲಿ ಮತ್ತು ಶ್ರೀಮತಿ ವೀಣಾ ನಂಜಣ್ಣ ಆಗಮಿಸಲಿದ್ದಾರೆ. ಸಾಹಿತಿ ನಾಗಪ್ಪ ತಳಕಲ್ ಮತ್ತು ನಿವೃತ್ತ ಮುಖ್ಯ ಇಂಜಿನಿಯರ್ ಎಸ್.ವಿ. ಪುಕಾಳೆ ಅವರನ್ನು ಸನ್ಮಾನಿಸಲಾಗುತ್ತದೆ. ಕೆ.ಎಚ್. ರೇವಣ್ಣ ನಿವೃತ್ತ ಡಿ ವೈ ಎಸ್ ಪಿ, ಡಿ.ಬಿ. ರುದ್ರೇಗೌಡ, ಮಾಜಿ ಸದಸ್ಯರು ಮಹಾನಗರ ಪಾಲಿಕೆ, ಎಲ್.ಎಸ್. ಅಜಗಣ್ಣ, ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ ಎಂದು ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ವಸಂತ ಅವರು ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ಚಕ್ರವರ್ತಿ ಸೂಲಿಬೆಲೆ ಅವರಿಂದ ಸರಣಿ ಉಪನ್ಯಾಸ

ನಮೋ ಬ್ರಿಗೇಡ್ ದಾವಣಗೆರೆ ವತಿಯಿಂದ ಮೂರು ದಿನಗಳ ಕಾಲ ಸರಣಿ ಉಪನ್ಯಾಸ ಹಮ್ಮಿಕೊಳ್ಳಲಾಗಿದ್ದು, 'ಇನ್ನೂ ಮಲಗಿದರೆ, ಏಳುವಾಗ ಭಾರತ ವಿರುವುದಿಲ್ಲ!' ಎಂಬ ಶೀರ್ಷಿಕೆಯಡಿ ಚಿಂತಕ ಯುವಾ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಉಪನ್ಯಾಸ ನೀಡಲಿದ್ದಾರೆ. ಇಂದಿನಿಂದ 3 ದಿನ ಪ್ರತಿದಿನ ಸಂಜೆ 6-15 ರಿಂದ 8 ರವರೆಗೆ ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾ ಗಿದೆ. ಚಕ್ರವರ್ತಿ ಸೂಲಿಬೆಲೆಯವರು ಉಪನ್ಯಾಸ ಮಾಲಿಕೆ ಮೂಲಕ ಭಾರತ ಭಂಜನೆಯ ಷಡ್ಯಂತ್ರಗಳ ಕುರಿತು ಬೆಳಕು ಚೆಲ್ಲಲಿದ್ದಾರೆ ಎಂದು ರಾಜ್ಯ ಸಂಚಾ ಲಕ ಶಾರದಾ ಡೈಮಂಡ್ ಮತ್ತು ಜಿಲ್ಲಾ ಸಂಚಾಲಕ ಚಂದ್ರಮೋಹನ್ ತಿಳಿಸಿದ್ದಾರೆ.

## ಗೊಲ್ಲರಹಳ್ಳಿಯಲ್ಲಿ ಇಂದು ಯಜ್ಞ ಪೂಜೆ

ದಾವಣಗೆರೆ ತಾಲ್ಲೂಕಿನ ಗೊಲ್ಲರಹಳ್ಳಿ ಗ್ರಾಮದ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ ಹೋಮ, ಯಜ್ಞ ಪೂಜಾ ಕಾರ್ಯಕ್ರಮದ ನಂತರ ಮಧ್ಯಾಹ್ನ 12 ರಿಂದ 12.30ರವರೆಗೆ ದೇವರ ಪ್ರತಿಷ್ಠಾಪನೆ ಮಾಡಲಾಗುವುದು. ಮಧ್ಯಾಹ್ನ 12.30ಕ್ಕೆ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಕಾಂತರಾಜ್ ವರದಿ ಕೈ ಬಿಡಲು ಒತ್ತಾಯ

ದಾವಣಗೆರೆ, ನ.24- ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆಯ ಕಾಂತರಾಜು ವರದಿ ಅವೈಜ್ಞಾನಿಕವಾಗಿದ್ದು, ಅದನ್ನು ಕೂಡಲೇ ಕೈಬಿಟ್ಟು, ನೂತನವಾಗಿ ಸಮೀಕ್ಷೆ ನಡೆಸುವಂತೆ ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಘಟಕದ ಅಧ್ಯಕ್ಷ ಜಿ. ಶಿವಯೋಗಪ್ಪ ಒತ್ತಾಯಿಸಿದ್ದಾರೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂತರಾಜು ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಯಾರ ಮನೆಗೂ ಭೇಟಿ ನೀಡಿಲ್ಲ. ಎಲ್ಲೋ ಕೆಲ ಮನೆಗಳಿಗೆ ಮಾತ್ರ ಭೇಟಿ ನೀಡಿ ಅವೈಜ್ಞಾನಿಕ ವರದಿ ತಯಾರಿಸಲಾಗಿದೆ. ಎಲ್ಲ ಸಮುದಾಯದ ವರನ್ನು ನಿರ್ಲಕ್ಷಿಸಿ ತಮಗೆ ಬೇಕಾದಂತೆ ಕಾಂತ ರಾಜು ಮೂಲಕ ಜನಪ್ರತಿನಿಧಿಗಳು ವರದಿ ಸಿದ್ಧಪಡಿಸಿದ್ದಾರೆ ಎಂದು ಆರೋಪಿಸಿದರು.

2015ರಲ್ಲಿ ಸಿದ್ಧರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ವರದಿ ಸಿದ್ಧಪಡಿಸಲಾಗಿತ್ತು. ಆ ಅವಧಿಯಲ್ಲೇ ವರದಿ ಅಂಗೀಕರಿಸದೇ ಈಗ ವರದಿ ಅಂಗೀಕರಿಸಲು ಉತ್ಸಾಹ ತೋರುತ್ತಿದ್ದಾರೆ. ಇದು ಗೊಂದಲ ಮೂಡಿಸುತ್ತಿದೆ. ನ್ಯಾಯಸಮ್ಮತವಾದ ವರದಿ ಸಿದ್ಧಪಡಿಸಬೇಕು ಎಂದು ಒತ್ತಾಯಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರೂ ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅವರನ್ನು ತಾಲ್ಲೂಕು ಘಟಕ ಬೆಂಬಲಿಸುತ್ತದೆ. ಕೂಡಲೇ ಕಾಂತರಾಜು ವರದಿ ಕೈಬಿಟ್ಟು ಹೊಸ ವರದಿ ಸಿದ್ಧಪಡಿಸಬೇಕು ಎಂದು ಅವರು ಆಗ್ರಹಿಸಿದರು.

ಮಹಾಸಭಾದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಕಟ್ಟಿಮನಿ, ಉಪಾಧ್ಯಕ್ಷ ಶಿವಮೂರ್ತಿಸ್ವಾಮಿ, ಹಾಲೇಶ್ ಕಾಯಿಪೇಟೆ ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರದಲ್ಲಿ ನಾಳೆ ಉಚಿತ ಆರೋಗ್ಯ ತಪಾಸಣೆ

ದಾವಣಗೆರೆ, ನ. 24 - ಶ್ರೀ ಭಗವಾನ್ ಮಹಾವೀರ್ ಜೈನ್ ಹಾಸ್ಪಿಟಲ್ ವತಿಯಿಂದ ನಾಡಿದ್ದು ದಿನಾಂಕ 26ರ ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆಯನ್ನು ಶ್ರೀ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ನಡೆಸಲಾಗುವುದು.

ತಜ್ಞ ವೈದ್ಯರಾದ ಡಾ. ಅಭಿಮಾನ್ ಎನ್. ಹಾಗೂ ಡಾ. ಯತೀಶ್ ಹೆಚ್.ಎಂ. ಅವರು ಆರೋಗ್ಯ ತಪಾಸಣೆ ನಡೆಸುವರು. ವಿವರಕ್ಕೆ ಸಂಪರ್ಕಿಸಿ : 08192-470872, 9606048421, 96060 48422.

## ಜಾತಿ ಗಣತಿ ದಾಖಲಾತಿಗಳು ಶೀಘ್ರದಲ್ಲೇ ಸಿಎಂ ಕೈಗೆ



ದಾವಣಗೆರೆ, ನ.24- ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಹಾಗೂ ಮಾಜಿ ಸಚಿವ ಜಯಪ್ರಕಾಶ್ ಹೆಗಡೆಯವರನ್ನು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಇಂದು ಭೇಟಿ ಮಾಡಿದ್ದರು.

ನ್ಯಾಯಮೂರ್ತಿ ಕಾಂತರಾಜ್ ಆಯೋಗದ ಜಾತಿ ಗಣತಿಯ ಮೂಲ ದಾಖಲಾತಿಗಳು ಕಳೆದಿವೆ ಎಂದು ಮಾಧ್ಯಮದಲ್ಲಿ ಬರುತ್ತಿರುವುದರ ಬಗ್ಗೆ ಬಸವರಾಜ್ ಅಧ್ಯಕ್ಷರೊಂದಿಗೆ ಚರ್ಚಿಸಿದರು. ಇದಕ್ಕೆ ಉತ್ತರಿಸಿದ ಜಯಪ್ರಕಾಶ್ ಹೆಗಡೆಯವರು ಜಾತಿ ಗಣತಿಯ ಯಾವುದೇ ಮೂಲ ದಾಖಲಾತಿಗಳು ಕಳೆದು ಹೋಗಿಲ್ಲ. ನನ್ನಲ್ಲಿ ಎಲ್ಲಾ ದಾಖಲಾತಿಗಳು ಇವೆ. ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ವರದಿಯನ್ನು ಸಲ್ಲಿಸಲಿದ್ದೇನೆ ಎಂದು ತಿಳಿಸಿದರು.

## ಹೊನ್ನಾಳಿ ಕಸಬಾ ಸೊಸೈಟಿ ಅಧ್ಯಕ್ಷರಾಗಿ ಬಿ.ಎಲ್.ಕುಮಾರಸ್ವಾಮಿ ಆಯ್ಕೆ



ಹೊನ್ನಾಳಿ, ನ. 24 - ಕಸಬಾ ಸೊಸೈಟಿ ಅಧ್ಯಕ್ಷರಾಗಿ ಚುನಾವಣೆ ಮೂಲಕ ಒಂದು ಮತದ ಅಂತರದಲ್ಲಿ ಬಿ.ಎಲ್. ಕುಮಾರ ಸ್ವಾಮಿ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ನವೀನ್‌ಕುಮಾರ್ ತಿಳಿಸಿದರು.

ನಿಕಟಪೂರ್ವ ಅಧ್ಯಕ್ಷ ಜಿನದತ್ತ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಕಸಬಾ ಸೊಸೈಟಿ ಅಧ್ಯಕ್ಷ ಸ್ಥಾನಕ್ಕೆ ಚುನಾವನೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಬಿ.ಎಲ್. ಕುಮಾರಸ್ವಾಮಿ ಹಾಗೂ ಹೆಚ್. ಸಿ. ಪ್ರಕಾಶ್ ಇಬ್ಬರು ನಾಮಪತ್ರ ಸಲ್ಲಿಸಿದ್ದರು. ಬಿ.ಎಲ್. ಕುಮಾರಸ್ವಾಮಿ ಪರವಾಗಿ ಏಳು ಮತಗಳು ಹಾಗೂ ಪ್ರಕಾಶ್ ಪರವಾಗಿ 6 ಮತಗಳು ಚಲಾವಣೆಗೊಂಡವು.

ಕಸಬಾ ಸೊಸೈಟಿಯ ನಿರ್ದೇಶಕರಾದ ಹನುಮಂತಪ್ಪ, ಜಿನದತ್ತ, ಉಪಾಧ್ಯಕ್ಷ ಪುಟ್ಟುರಾಜು, ನಿರ್ದೇಶಕ ಗುಂಡು, ಚಂದ್ರು, ರಾಣಿ ಸುರೇಶ್, ಸರೋಜಮ್ಮ, ಎಂ.ಸುರೇಶ್, ಕತ್ತಿಗೆ ನಾಗರಾಜ್, ಶಿವಶಂಕರಪ್ಪ, ಈಶ್ವರನಾಯ್ಕ, ಡಿಸಿಸಿ ಪ್ರತಿನಿಧಿ ಲೋಕೇಶಪ್ಪ, ಕಾರ್ಯದರ್ಶಿ ರವಿಕುಮಾರ್, ಸುರೇಶ್ ಇನ್ನಿತರರಿದ್ದರು.

## ಹರಿಹರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಶಿವಮೊಗ್ಗ ರಸ್ತೆ, ಬೈಪಾಸ್, ತರಳಬಾಳು ಬಡಾವಣೆ, ವಿದ್ಯಾನಗರ ಎ, ಬಿ, ಸಿ ಬ್ಲಾಕ್, ಇಂದಿರಾನಗರ, ಪ್ರಶಾಂತನಗರ, ಕಾಳಿಕದಾಸ ನಗರ, ಬೆಂಕಿನಗರ, ಜೆ.ಸಿ. ಬಡಾವಣೆ, ದೇವಸ್ಥಾನ ರಸ್ತೆ, ಮುರಕಲ್ ಕಾಂಪೌಂಡ್, ವೀರಭದ್ರೇಶ್ವರ ದೇವಸ್ಥಾನ ಸುತ್ತಮುತ್ತ, ಬಾಹರ್ ಮಕಾನ್, ವಿ.ಆರ್.ಎಲ್. ರಸ್ತೆ, ರಾಮ ಮಂದಿರ, 1ನೇ ರೈಲ್ವೆ ಗೇಟ್, ಜ್ಯೋತಿರ್‌ಮಠ, ಏರಿಯಾ ಎಫ್-1 ಆಂಜನೇಯ ಫೀಡರ್, ಎಫ್-2 ಬಾಲಾಜಿ, ಎಫ್-3 ಹರಿಹರೇಶ್ವರ, ಎಫ್-4 ವಿದ್ಯಾನಗರ ಫೀಡರ್, ಹಳ್ಳದಕೇರಿ, ಕೈಲಾಸನಗರ, ಗಂಗಾನಗರ, ತೆಗ್ಗಿನಕೆರೆ, ಆಂಜನೇಯ ಆಗ್ರೋಟೆಕ್, ದೋಸ್ತಾನ ರೈಸ್ ಮಿಲ್, ಟೆಂಪಲ್ ರೋಡ್, ಜಾಮಿಯಾ ಮಸೀದಿ, ಹಳೆ ಬಂಬೂ ಬಜಾರ್, ಹಳೆ ತಹಶೀಲ್ದಾರ್ ರೋಡ್, ಶಿಬಾರ ಸರ್ಕಲ್, ನಡವಲ ಪೇಟೆ, ಇಂಡಸ್ಟ್ರೀಯಲ್ ಹನಗವಾಡಿ ಕೆ.ಐ.ಡಿ.ಬಿ ಮತ್ತು ಐ.ಪಿ ವಲಯ ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


ಹುಟ್ಟುಹಬ್ಬದ ಶುಭಾಶಯಗಳು



ಮಾಜಿ ಸಚಿವರೂ ಹಾಗೂ ಜನಪ್ರಿಯ ಶಾಸಕರಾದ
ಶ್ರೀ ಎಸ್.ಎ. ರವೀಂದ್ರನಾಥ್
ಅವರು 78ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು,
ಈ ಶುಭ ಸಂದರ್ಭದಲ್ಲಿ ಶ್ರೀಯುತರಿಗೆ
ಹುಟ್ಟುಹಬ್ಬದ ಶುಭಾಶಯಗಳು.

ಶುಭ ಕೋರುವವರು:



ಶ್ರೀನಿವಾಸರಾವ್ ಎಂ.ಜಿ.
ಮಾಲೀಕರು
ಮಹೇಂದ್ರಕರ್ ಟೆಕ್ಸ್‌ಟೈಲ್ಸ್



ವಿಠಲ್ ಎಂ.ಎಸ್.
ಅಧ್ಯಕ್ಷರು, ನಾಮದೇವ ಸಿಂಪಿ ಸಮಾಜ, ದಾವಣಗೆರೆ.
ಮಾಜಿ ಮಹಾಪೌರರು, ದಾವಣಗೆರೆ ನಗರ ಪಾಲಿಕೆ.



ಗಣೇಶ್ ಎಂ.ವಿ.
ಮಾಲೀಕರು
ಮಹೇಂದ್ರಕರ್ ಟೆಕ್ಸ್‌ಟೈಲ್ಸ್

ಹಾಗೂ ಸಿಬ್ಬಂದಿ ವರ್ಗದವರು

ಮಹೇಂದ್ರಕರ್ ಟೆಕ್ಸ್‌ಟೈಲ್ಸ್, ಎನ್.ಆರ್. ರಸ್ತೆ, ದಾವಣಗೆರೆ.



ಶುಭಾಶಯಗಳು

ಇಂದು ಶುಭಾರಂಭಗೊಳ್ಳುತ್ತಿರುವ...

ಶ್ರೀ ಲಕ್ಷ್ಮಿನರಸಿಂಹ ಕೋಲ್ಡ್ ಸ್ಟೋರೇಜ್, ಹರಿಹರ

ಇದರ ಉದ್ಘಾಟನೆಗೆ ಶುಭ ಹಾರೈಸುವವರು...

- ಕೆರಿಯರ್ ಇಂಡಿಯಾ ಪ್ರೈವೇಟ್ ಲಿ. ಬೆಂಗಳೂರು
- ಶ್ರೀ ವಿನಾಯಕ ರೈಸ್ ಇಂಡಸ್ಟ್ರೀಸ್ (ರೈಸ್ ಮಿಲ್) ದಾವಣಗೆರೆ
- ಬಿಸಲೇರಿ ಬ್ರದರ್ಸ್, ದಾವಣಗೆರೆ
- ಶ್ರೀ ಗುರುಬಸವೇಶ್ವರ ಟ್ರೇಡರ್ಸ್, ದಾವಣಗೆರೆ
- ಇಂದು ಟ್ರೇಡರ್ಸ್, ದಾವಣಗೆರೆ
- ಕೆ.ಎಲ್.ಪಿ. ಟ್ರೇಡರ್ಸ್, ದಾವಣಗೆರೆ
- ಪ್ರಶಾಂತ್ ಪ್ರಾವಿಜನ್ ಸ್ಟೋರ್, ದಾವಣಗೆರೆ
- ಕೆ.ಬಿ.ಎಂ. ಪ್ರಾವಿಜನ್ ಸ್ಟೋರ್, ದಾವಣಗೆರೆ
- ಎಂ.ಎಸ್.ಬಿ. ಫ್ರೆಂಡ್ಸ್, ದಾವಣಗೆರೆ
- ಪ್ರೊ. ಎಲ್. ಸತ್ಯನಾರಾಯಣ ಮತ್ತು ಫ್ಯಾಮಿಲಿ ದಾವಣಗೆರೆ
- ಎಸ್.ಎಲ್.ಎನ್. ಫ್ಯಾಮಿಲಿ, ದಾವಣಗೆರೆ
- ಕುದೂರು ಫ್ಯಾಮಿಲಿ, ದಾವಣಗೆರೆ
- ಟಿ.ಎಚ್.ಎಂ. ಶಿವಯೋಗಿಸ್ವಾಮಿ ಫ್ಯಾಮಿಲಿ ದಾವಣಗೆರೆ
- ಎನ್.ಆರ್.ಎಚ್. ಫ್ಯಾಮಿಲಿ, ತರೀಕೆರೆ
- ಎ.ಬಿ. ಓಂಕಾರಪ್ಪ ಮತ್ತು ಎ.ಬಿ. ಷಡಾಕ್ಷರಿ, ದಾವಣಗೆರೆ
- ಬ್ಯಾಡಗಿ ಪುಟ್ಟಪ್ಪ ಸನ್ಸ್ ದಾವಣಗೆರೆ
- ಬಿ. ಗಂಗಾಧರಪ್ಪ & ಸನ್ಸ್, ದಾವಣಗೆರೆ
- ಎನ್. ಆದಪ್ಪ & ಸನ್ಸ್, ದಾವಣಗೆರೆ
- ಪಾಂಡುರಂಗ ಏಜೆನ್ಸೀಸ್, ದಾವಣಗೆರೆ
- ಮಾರುತಿ ಕ್ಯಾನ್ವಾಸಿಂಗ್, ದಾವಣಗೆರೆ
- ಬೆಳ್ಳೂಡಿ ಶಿವು, ದಾವಣಗೆರೆ
- ಮಾರುತಿ ಎಂಟರ್ ಪ್ರೈಸಸ್, ದಾವಣಗೆರೆ
- ಶಿವಶಕ್ತಿ ಕ್ಯಾನ್ವಾಸಿಂಗ್, ಬೆಂಗಳೂರು
- ಸೌತ್ ಇಂಡಿಯಾ ಏಜೆನ್ಸೀಸ್ ಇಂದೋರ್
- ಡಿ.ಸಿದ್ದಪ್ಪ ಅಂಡ್ ಸನ್ಸ್, ಹರಿಹರ
- ಮಾರುತಿ ಇಂಡಸ್ಟ್ರೀಸ್, ಹಾಸನ
- ಲಕ್ಷ್ಮಿ ಮಿಲ್ಸ್, ಹಾವೇರಿ
- ಶ್ರೀ ಸಾಯಿ ರಘುರಾಂ ಇಂಡಸ್ಟ್ರೀಸ್, ಗಂಗಾವತಿ
- ನಂದಕೇಶ್ವರ ಇಂಡಸ್ಟ್ರೀಸ್, ಬೆಳಗಾಂ
- ಹರಿ ಓಂ ಟ್ರೇಡರ್ಸ್ ಹುಬ್ಬಳ್ಳಿ
- ಶ್ರೀ ಮಂಜುನಾಥ ಟ್ರೇಡಿಂಗ್ ಕಂಪನಿ, ಬೆಂಗಳೂರು
- ಶಿವಶಕ್ತಿ ಇಂಡಸ್ಟ್ರೀಸ್ , ಕಲಬುರ್ಗಿ
- ಶ್ರೀ ಸಾಯಿನಾಥ ದಾಲ್ ಇಂಡಸ್ಟ್ರೀಸ್, ಮುದ್ದೇಬಿಹಾಳ್
- ಶ್ರೀ ಕೈಲಾಸ್ ಗ್ರೇನ್ ಮಿಲ್ಸ್ ಇಂದೋರ್
- ಲಕನ್ ಇಂಡಸ್ಟ್ರೀಸ್, ಇಂದೋರ್
- ವಿಶ್ವಭಾರತಿ ಫುಡ್ಸ್ ಪ್ರೈವೇಟ್ ಲಿ. ಜಲಗಾಂವ್
- ಮುರಳಿ ಆಗ್ರೋ ಇಂಡಸ್ಟ್ರೀಸ್, ಸೊಲ್ಲಾಪುರ
- ಶ್ರೀ ಲಕ್ಷ್ಮಿವೆಂಕಟೇಶ್ವರ ಟ್ರೇಡಿಂಗ್ ಕಂಪನಿ, ಗದಗ
- ಶ್ರೀ ರಾಘುವೇಂದ್ರ ಟ್ರೇಡಿಂಗ್ ಕಂಪನಿ, ಗದಗ
- ಶ್ರೀರಾಮ ಟ್ರೇಡಿಂಗ್ ಕಂಪನಿ, ಗದಗ
- ಗುರುರಾಜ ಟ್ರೇಡಿಂಗ್ ಕಂಪನಿ, ಗದಗ
- ಅನ್ನಪೂರ್ಣ ಆಗ್ರೋ ಇಂಡಸ್ಟ್ರೀಸ್, ಗದಗ
- ಫಕೀರೇಶ್ವರ ಟ್ರೇಡಿಂಗ್ ಕಂಪನಿ, ಗದಗ
- ಬಾಲಾಜಿ ಇಂಡಸ್ಟ್ರೀಸ್, ಗದಗ




ಶ್ರೀ ಲಕ್ಷ್ಮೀನರಸಿಂಹ ಗ್ರೂಪ್, ದಾವಣಗೆರೆ.

## 27ರಂದು ಸಿಎಂ ಜನತಾದರ್ಶನ




ಬೆಂಗಳೂರು, ನ. 24 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ ದಿನಾಂಕ 27 ರ ಬುಧವಾರ ಬೆಳಿಗ್ಗೆ 9.30 ರಿಂದ ಗೃಹ ಕಚೇರಿ ಕೃಷ್ಣಾದಲ್ಲಿ ಜನತಾ ದರ್ಶನ ನಡೆಸಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ. ಜನರ ಬಳಿಗೇ ಆಡಳಿತ ಕೊಂಡೊಯ್ಯುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ಪ್ರತಿ ತಿಂಗಳು ಜನತಾ ದರ್ಶನ ನಡೆಸುವಂತೆ ಸೂಚಿಸಿದ್ದರು. ಇದೀಗ ಸ್ವತಃ ಮುಖ್ಯಮಂತ್ರಿಯವರು ಬೆಂಗಳೂರಿನಲ್ಲಿ ಜನತಾ ದರ್ಶನ ನಡೆಸಿ, ಸಾರ್ವ ಜನಿಕರ ಅಹವಾಲುಗಳನ್ನು ಆಲಿಸಿ, ಬಗೆಹರಿಸಲು ಕ್ರಮ ಕೈಗೊಳ್ಳಲಿದ್ದಾರೆ.

## ದಕ್ಷಿಣ ಭಾರತ ವಿಶ್ವವಿದ್ಯಾನಿಲಯಗಳ ಕ್ರೀಡಾಕೂಟಕ್ಕೆ ವಿಕಾಸ್ ಆಯ್ಕೆ



ದಾವಣಗೆರೆ, ನ. 24- ನಗರದ ಚಾಣಕ್ಯ ಪ್ರಥಮ ದರ್ಜೆ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿ ವಿಕಾಸ್ ಎಲ್.ಕೆ. ವೆಯ್ಟ್ ಲಿಫ್ಟಿಂಗ್‌ನಲ್ಲಿ ದಾವಣಗೆರೆ ವಿವಿ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು, ದಕ್ಷಿಣ ಭಾರತ ವಿಶ್ವವಿದ್ಯಾನಿಲಯಗಳ ಕ್ರೀಡಾಕೂಟಕ್ಕೆ ಆಯ್ಕೆಯಾಗಿರುತ್ತಾರೆ.


## ಸ್ವದೇಶಾಗಮನ - ಸುಸ್ವಾಗತ




ಯಶಸ್ವಿಯಾಗಿ ದುಬೈ ವಿದೇಶ ಪ್ರವಾಸ ಮುಗಿಸಿ,
ತಾಯ್ನಾಡಿಗೆ ಮರಳುತ್ತಿರುವ ನಮ್ಮೆಲ್ಲರ ನೆಚ್ಚಿನ ಹಿರಿಯರೂ,
ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರೂ, ನೌಕರರ
ಗೃಹ ನಿರ್ಮಾಣ ಸಹಕಾರಿ ಸಂಘದ ಗೌರವಾಧ್ಯಕ್ಷರೂ, ಶಿಕ್ಷಣ
ತಜ್ಞರೂ, ನಮ್ಮೆಲ್ಲರ ನೆಚ್ಚಿನ ಗುರುಗಳು, ಸ್ನೇಹ ಜೀವಿಗಳೂ,
ಮಾರ್ಗದರ್ಶಕರೂ ಆದ

**ಶ್ರೀ ಹೆಚ್.ಕೆ. ಲಿಂಗರಾಜ್** ಅವರಿಗೆ
ಹೃದಯಪೂರ್ವಕ ಸುಸ್ವಾಗತ.

**ಶಿಷ್ಯ ವರ್ಗ ಹಾಗೂ ಸ್ನೇಹಿತರು ಮತ್ತು ಅಭಿಮಾನಿ ಬಳಗ, ದಾವಣಗೆರೆ.**


## ತಿಪ್ಪೇಶ್ ಬೇತೂರು ನಿಧನ



ದಾವಣಗೆರೆ ಪಿ.ಬಿ.ರಸ್ತೆಯ
ಶ್ರೀ ವಿನಾಯಕ ಸ್ಟೀಲ್ಸ್,
ಶ್ರೀ ವಿನಾಯಕ ಅಸೋಸಿಯೇಟ್ಸ್ ಮಾಲೀಕರಾದ

**ಶ್ರೀ ತಿಪ್ಪೇಶ್ ಬೇತೂರು**

ಅವರು ದಿನಾಂಕ 24-11-2023 ರ ಶುಕ್ರವಾರ ಬೆಳಗಿನ ಜಾವ 4-30ರ ಸುಮಾರಿಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪತ್ನಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24-11-2023ರ ಶುಕ್ರವಾರದಂದೇ ಸಂಜೆ 5-30ಕ್ಕೆ ನಗರದ ಹಳೇ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದು:ಖತಪ್ತ ಕುಟುಂಬ ವರ್ಗ
ಮೊ: 98448 04080,
984540 7979, 98867 42164

**ಕೈಲಾಸ ಶಿವಗಣಾರಾಧನೆ :**
ಶ್ರೀಯುತರ ಕೈಲಾಸ ಶಿವಗಣಾರಾಧನೆಯು ದಿನಾಂಕ 02-12-2023ರ ಶನಿವಾರ ಅವರ ಸ್ವಗೃಹದಲ್ಲಿ ನೆರವೇರಲಿದೆ.


SRI LAKSHMINARASIMHA BRAND DAVANGERE

ಇಂದು ಉದ್ಘಾಟನೆಗೊಳ್ಳುತ್ತಿರುವ

**ಶ್ರೀ ಲಕ್ಷ್ಮಿನರಸಿಂಹ ಕೋಲ್ಡ್ ಸ್ಟೋರೇಜ್**

ಎ.ಪಿ.ಎಂ.ಸಿ. ಪ್ರಾಂಗಣ, ನಂ. 144, "ಈ" ಬ್ಲಾಕ್, ಹರಿಹರ.

ಇವರಿಗೆ ಶುಭ ಕೋರುವವರು....

- **ಶ್ರೀ ಬಸವರಾಜ್ ಟಿ.ಹೆಚ್.ಎಂ.**
  ಉಪನ್ಯಾಸಕರು, ಜಿ.ಆರ್.ಐ.ಸಿ.ಪಿ., ಬೆಂಗಳೂರು.
- **ಶ್ರೀ ಕೃಷ್ಣಮೂರ್ತಿ ಹೆಚ್.ಡಿ.**
  ಮಾಲೀಕರು, ವಿಘ್ನೇಶ್ವರ ಏಜೆನ್ಸೀಸ್, ದಾವಣಗೆರೆ.
- **ಶ್ರೀ ಶ್ರೀಕಾಂತ್ ಎಂ.**
  ಮಾಲೀಕರು, ಶ್ರೀ ಎಂಟರ್‌ಪ್ರೈಸಸ್, ದಾವಣಗೆರೆ.
- **ಶ್ರೀ ಶಿವಪ್ರಕಾಶ್ ಜಿ.ಬಿ.**
  ಲೆಕ್ಕಪರಿಶೋಧಕರು, ಶಿವಪ್ರಕಾಶ್ ಅಸೋಸಿಯೇಟ್ಸ್, ದಾವಣಗೆರೆ.
- **ಶ್ರೀ ಎಂ. ಶ್ರೀನಿವಾಸರೆಡ್ಡಿ**
  ಮಾಲೀಕರು, ಫ್ರೆಂಡ್ಸ್ ಶಾಮಿಯಾನ ಸಪ್ಲೈಯರ್ಸ್
  ಅಶಿತಾ ಎಂಟರ್‌ಪ್ರೈಸಸ್, ಸ್ಟೇಡಿಯಂ ರಸ್ತೆ, ದಾವಣಗೆರೆ.
- **ಶ್ರೀ ಟಿ. ರಾಮಕೃಷ್ಣ**
  ಮಾಲೀಕರು, ಬಾಲಾಜಿ ಪೌಲ್ಟ್ರಿ ಫಾರಂ, ತರಳಬಾಳು ನಗರ, (ಆರನೇ ಕಲ್ಲು) ದಾವಣಗೆರೆ.
- **ಶ್ರೀ ಎಚ್.ಜಿ. ಪ್ರಕಾಶ್**
  ಮಾಲೀಕರು, ಈಶ್ವರ್ ಶಾಮಿಯಾನ ಸಪ್ಲೈಯರ್ಸ್ ದಾವಣಗೆರೆ.
- **ಶ್ರೀ ವಾಸಿ ಟಿ.ಕೆ. ರವಿಕುಮಾರ್**
  ಮಾಲೀಕರು, ನ್ಯೂ ರತ್ನ ಹೊಸೈರಿ ಮಾರ್ಟ್, ದಾವಣಗೆರೆ.
- **ಶ್ರೀ ಸಂದೀಪ್ ಲೆಕ್ಕದ್,** ದಾವಣಗೆರೆ.
- **ಶ್ರೀ ವೆಂಕಟರಂಗಯ್ಯ,**
  ವೆಂಕಟ್ ಪ್ಲಾಂಟ್ಸ್ ನರ್ಸರಿ, ಆರನೇಕಲ್ಲು, ದಾವಣಗೆರೆ.
- **ಶ್ರೀ ಕೆ.ಟಿ. ನಾಗರಾಜ್,** ಹರಿಹರ.
- **ಶ್ರೀ ಗಿರೀಶ್ ಅಂದನೂರು**
  ಶ್ರೀ ವಾಗೀಶ್ ಟ್ರೇಡರ್ಸ್, ದಾವಣಗೆರೆ. (ಹಲಗೇರಿ)
- **ಶ್ರೀ ಆರ್. ರಮೇಶ್‌ರೆಡ್ಡಿ**
  ಸಿವಿಲ್ ಕಂಟ್ರ್ಯಾಕ್ಟರ್, ದಾವಣಗೆರೆ.






ದಾವಣಗೆರೆ ಜಿಲ್ಲೆಯಲ್ಲೇ ಪ್ರಪ್ರಥಮ ಕೋಲ್ಡ್ ಸ್ಟೋರೇಜ್

SRI LAKSHMINARASIMHA BRAND DAVANGERE

# ಶ್ರೀ ಲಕ್ಷ್ಮೀನರಸಿಂಹ ಕೋಲ್ಡ್ ಸ್ಟೋರೇಜ್
## ಹರಿಹರ

## ಉದ್ಘಾಟನಾ ಸಮಾರಂಭ ಆಹ್ವಾನ ಪತ್ರಿಕೆ

**ಶ್ರೀ ಲಕ್ಷ್ಮೀನರಸಿಂಹ ಗ್ರೂಪ್, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.**

ನಾವುಗಳು ನೂತನವಾಗಿ ಕಟ್ಟಿಸಿರುವ ಶ್ರೀ ಲಕ್ಷ್ಮೀನರಸಿಂಹ ಕೋಲ್ಡ್ ಸ್ಟೋರೇಜ್, ಹರಿಹರ
ಇದರ ಉದ್ಘಾಟನೆಯನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಕುಟುಂಬ ಸಮೇತರಾಗಿ ಆಗಮಿಸಿ,
ಈ ಶುಭ ಕಾರ್ಯದಲ್ಲಿ ಭಾಗವಹಿಸಿ, ನಮ್ಮೆಲ್ಲರ ಮನಸಂತೋಷಪಡಿಸಬೇಕೆಂದು ಕೋರುತ್ತೇವೆ.

ಉದ್ಘಾಟನೆ : **ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು**
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು : **ಶ್ರೀ ಶಾಮನೂರು ಶಿವಶಂಕರಪ್ಪನವರು**
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ.

**ಶ್ರೀ ಬಿ.ಪಿ. ಹರೀಶ್‌ರವರು**
ಶಾಸಕರು, ಹರಿಹರ ವಿಧಾನಸಭಾ ಕ್ಷೇತ್ರ.

ದಿನಾಂಕ : 25.11.2023ನೇ ಶನಿವಾರ,
ಮಧ್ಯಾಹ್ನ 1.30ಕ್ಕೆ
ಭೋಜನ : ಮಧ್ಯಾಹ್ನ 2 ರಿಂದ
ಸ್ಥಳ: ಶ್ರೀಲಕ್ಷ್ಮೀನರಸಿಂಹ ಕೋಲ್ಡ್ ಸ್ಟೋರೇಜ್,
ಎ.ಪಿ.ಎಂ.ಸಿ. ಪ್ರಾಂಗಣ.
ನಂ. 144, ಇ ಬ್ಲಾಕ್, ಹರಿಹರ.

**ತಮ್ಮ ಆಗಮನಾಭಿಲಾಷಿಗಳು**

**ಶ್ರೀ ಲಕ್ಷ್ಮೀನರಸಿಂಹ ಟ್ರೇಡರ್ಸ್,** # 617, ಚೌಕೀಪೇಟೆ, ದಾವಣಗೆರೆ
**ಶ್ರೀ ಲಕ್ಷ್ಮೀನರಸಿಂಹ ಎಂಟರ್‌ಪ್ರೈಸಸ್,** #643/1, ಚೌಕೀಪೇಟೆ ಕಾರ್ನರ್, ದಾವಣಗೆರೆ
**ಶ್ರೀ ಲಕ್ಷ್ಮೀನರಸಿಂಹ ಜನರಲ್ ಸ್ಟೋರ್,** #256, ಚಾಮರಾಜಪೇಟೆ, ದಾವಣಗೆರೆ
**ಶ್ರೀ ಸುಬ್ರಮಣ್ಯ ಟ್ರೇಡರ್ಸ್** #643/7 ಮಹಾರಾಜಪೇಟೆ, ದಾವಣಗೆರೆ.
**ಶ್ರೀ ವಿಶ್ವಲಕ್ಷ್ಮೀ ಟ್ರೇಡರ್ಸ್,** #643/8, ಮಹಾರಾಜಪೇಟೆ, ದಾವಣಗೆರೆ.
**ಶ್ರೀ ವಿಶ್ವಲಕ್ಷ್ಮೀ ಎಂಟರ್‌ಪ್ರೈಸಸ್,** #643/9, ಮಹಾರಾಜಪೇಟೆ, ದಾವಣಗೆರೆ